**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು.**

**ಸ್ಪೆಷಲ್ ಕೇಸ್ ನಂಬ್ರ 124/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಸುಧೀರ್ ಎಂ.ಹೆಗ್ಡೆ** | ಪ್ರಾ‌ಸಾಃ 29 |
| ತಂದೆಯ ಹೆಸರು | : | ಮಹಾದೇವ ಹೆಗ್ಡೆ | ಚಾಸಾಃ 89 |
| ಪ್ರಾಯ | : | 57 ವರ್ಷ | **ದಿನಾಂಕಃ 04.09.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಡಿ.ವೈ.ಎಸ್.ಪಿ ಬೆಂಗಳೂರು | |
| ವಾಸಸ್ಥಳ | : | ಬೆಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದಃ**

ನಾನು ದಿನಾಂಕ 11.04.2016 ರಿಂದ 25.10.2019 ರವರೆಗೆ ಮಂಗಳೂರಿನ ಎ.ಸಿ.ಬಿ ಠಾಣೆಯಲ್ಲಿ ಡಿ.ವೈ.ಎಸ್.ಪಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 21.12.2016 ರಂದು ಎಸ್.ಪಿ , ಎ.ಸಿ.ಬಿ ಮಂಗಳೂರು ಇವರು ಪಿ.ಐ ರವರು ಕೊಟ್ಟಂತಹ ಸೋರ್ಸ್ ವರದಿ ಮೇರೆಗೆ ಕಲಂ 17 ಪಿ.ಸಿ ಆ್ಯಕ್ಟ್ ಅದೇಶವನ್ನು ನೀಡಿದ್ದು ಅವುಗಳ ಮೇಲಿಂದ ಬೆಳಗ್ಗೆ 11.15 ರಂದು ಠಾಣಾ ಪ್ರಕರಣ ಸಂಖ್ಯೆ 6/16 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡಿರುತ್ತೇನೆ. ಸದರಿ ಪ್ರ.ವ.ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಇಟ್ಟು, ಪಿ ಎಂಬ ಅಕ್ಷರದಲ್ಲಿ ಸೀಲು ಮಾಡಿ ಘನ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಪ್ರ.ವ.ವರದಿಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ಸೋರ್ಸ್ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-1(ಬಿ)** ಎಂದು ಗುರುತಿಸಲಾಯಿತು.

ನಮ್ಮ ಮೇಲಾಧಿಕಾರಿಯವರು ನನಗೆ ಕೊಟ್ಟಿರುವ ದಾಖಲೆಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಯನ್ನು ತೋರಿಸಿದ ಮೇರೆಗೆ ಸಾಕ್ಷಿ ನೋಡಿ ಗುರುತಿಸಿದ್ದು ಅದು ದಿನಾಂಕ 21.12.2016 ರ ದಾಖಲೆಯಾಗಿದ್ದು, ಅದನ್ನು **ನಿಪಿ-125** ಎಂದು ಗುರುತಿಸಲಾಯಿತು.

3. ಆರೋಪಿತರ ಮನೆ ಮತ್ತು 1ನೇ ಆರೋಪಿಯ ಕಚೇರಿಯನ್ನು ಶೋಧನೆ ಮಾಡಲು ಶೋಧನಾ ವಾರೆಂಟನ್ನು ಘನ ನ್ಯಾಯಾಲಯದಿಂದ ಪಡೆದಿರುತ್ತೇನೆ. ಸಾಕ್ಷಿ ಒಂದು ದಾಖಲೆಯನ್ನು ತೋರಿಸಲಾಗಿ ಅದು ಶೋಧನಾ ವಾರೆಂಟ್ ಗಾಗಿ ನ್ಯಾಯಾಲಯಕ್ಕೆ ನೀಡಿರುವ ಮನವಿಯಾಗಿದ್ದು, ಸದರಿ ಮನವಿ ದಾಖಲೆಯನ್ನು **ನಿಪಿ-126** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-126(ಎ)** ಎಂದು ಗುರುತಿಸಲಾಯಿತು. ನ್ಯಾಯಾಲಯದಿಂದ ಜಾರಿಯಾದ ಶೋದನಾ ವಾರೆಂಟುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಗಳನ್ನು ಒಟ್ಟಾರೆಯಾಗಿ **ನಿಪಿ-127(2)** ಎಂದು ಗುರುತಿಸಲಾಯಿತು.

4. ಅದರಂತೆ, ಅದೇ ದಿನ ಪಂಚರಾಗಿ ಕಳುಹಿಸಿಕೊಡುವಂತೆ ಮಹಾನಗರ ಪಾಲಿಕೆ ಮತ್ತು ಜಿಲ್ಲಾ ಪಂಚಾಯತ್ ಮಂಗಳೂರು ಇವರಿಗೆ ಪತ್ರಗಳನ್ನು ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು **ನಿಪಿ-128** ಮತ್ತು **ನಿಪಿ-129 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ-128(ಎ)** ಎಂದು ಗುರುತಿಸಲಾಯಿತು.

5. ಅದೇ ದಿನ ಸಂಜೆ 5 ಗಂಟೆಗೆ ಮಹಾನಗರ ಪಾಲಿಕೆ ಯಿಂದ ಲತೇಶ್ ಕುಮಾರ್ ಮತ್ತು ರಾಜು ಹಾಗೂ ಜಿಲ್ಲಾ ಪಂಚಾಯಿತಿಯಿಂದ ಭರತ್ ಮತ್ತು

ಶ್ರೀಮತಿ ವಾಣಿಶ್ರೀ ರವರು ತಮ್ಮ ಮೇಲಾಧಿಕಾರಿಯವರ ಪತ್ರದೊಂದಿಗೆ ನನ್ನ ಮುಂದೆ ಬಂದು ಹಾಜರಾಗಿರುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ವ್ಯಕ್ತಿಗಳನ್ನು ಪಂಚರಾಗಿ ನೇಮಿಸಿದ ಪತ್ರಗಳನ್ನು ಕ್ರಮವಾಗಿ **ನಿಪಿ-130 ಮತ್ತು ನಿಪಿ-131** ಎಂದು ಗುರುತಿಸಲಾಯಿತು. ಸದರಿ ಪಂಚರಿಗೆ ಮರುದಿನ ಬೆಳಗ್ಗೆ 5 ಗಂಟೆಗೆ ಬರುವಂತೆ ಸೂಚಿಸಿ ಕಳುಹಿಸಿಕೊಟ್ಟಿರುತ್ತೇನೆ.

6. ಮರುದಿನ ಬೆಳಗ್ಗೆ 5 ಗಂಟೆಗೆ ನಾನು ಠಾಣೆಯಲ್ಲಿದ್ದಾಗ 4 ಜನ ಪಂಚರು ಮತ್ತು ಠಾಣಾ ಸಿಬ್ಬಂದಿಗಳು ಹಾಜರಿದ್ದರು. ಅವರುಗಳಿಗೆ ಸೂಕ್ತ ಸೂಚನೆಗಳನ್ನು ನೀಡಿದ ನಂತರ ಬೆಳಗ್ಗೆ 5.15 ಗಂಟೆಗೆ ಠಾಣೆಯನ್ನು ಬಿಟ್ಟು ಅರೋಪಿತರ ಮನೆಗೆ ಹೊರಟಿರುತ್ತೇವೆ. ಬೆಳಗ್ಗೆ 6.30 ಗಂಟೆಗೆ ಬೆಳ್ತಂಗಡಿ ತಾಲೂಕಿನ ಕೂವೆಟ್ಟು ಗ್ರಾಮದಲ್ಲಿರುವ ಆರೋಪಿತರ ಮನೆಗೆ ತಲುಪಿರುತ್ತೇವೆ. ಅಲ್ಲಿ ಬಾಗಿಲನ್ನುತೆಗೆದ 1ನೇ ಆರೋಪಿಗೆ ನನ್ನ ಪರಿಚಯವನ್ನು ಮಾಡಿಸಿ, ನಾನು ತಂದ ಶೋಧನಾ ವಾರೆಂಟನ್ನು ತೋರಿಸಿ, ಕಾರಣವನ್ನು ತಿಳಿಸಿ , ಮನೆಯಲ್ಲಿರುವ ಇತರ ಸದಸ್ಯರನ್ನು ಹಾಜರುಪಡಿಸುವಂತೆ ಕೇಳಿದ್ದು ಅವರ ಪತ್ನಿ ಮತ್ತು ಮಕ್ಕಳು ಬಂದಿರುತ್ತಾರೆ. ಅವರಿಗೆಲ್ಲಾ ಶೋಧನಾ ವಾರೆಂಟನ್ನು ತೋರಿಸಿ, ಕಾರಣವನ್ನು ವಿವರಿಸಿ ಶೋಧನಾ ವಾರೆಂಟ್ ನ ಮೇಲೆ ಅವರೆಲ್ಲರ ಸಹಿಯನ್ನುಪಡೆದು ಅದನ್ನು ಜಾರಿಗೊಳಿಸಿರುತ್ತೇನೆ. ಸದರಿ ವಾರೆಂಟ್ ನ ಮೇಲೆ ಪಂಚರ ಸಹಿಗಳನ್ನು ಪಡೆದಿರುತ್ತೇನೆ. ಜಾರಿಗೊಳಿಸಿದ್ದ ಬಗ್ಗೆ ನಾನು ಸಹ ಶರಾ ಬರೆದು ಸಹಿ ಮಾಡಿರುತ್ತೇನೆ.

7. ನಂತರ ನಾನು, ಪಂಚರು ಮತ್ತು ಸಿಬ್ಬಂದಿಗಳು ಅಂಗಶೋಧನೆ ಮಾಡಲು ಸಹಕರಿಸುವಂತೆ ಕೇಳಿರುತ್ತೇನೆ. ಅಂಗಶೋಧನೆಯ ನಂತರ, ಮಹಜರು ಪ್ರಕ್ರಿಯೆ ಪ್ರಾರಂಭಿಸಿರುತ್ತೇನೆ. ಮಹಜರು ಕಾಲಕ್ಕೆ ಆರೋಪಿತರು ಚರ್ಚಿಸಿ ತಿಳಿಸಿದ ಮೌಲ್ಯ ಮತ್ತು ಅರ್ಜಿಸಿದ ವಿವರವನ್ನು ನಮೂದಿಸಿರುತ್ತೇನೆ. ಮಹಜರಿನಲ್ಲಿ ನಮೂದಿಸಿದ ಕ್ರಮಸಂಖ್ಯೆ-1, 3, 4, 5, 9, 16, 19, 20, 21, 23, 25, 27, 28, 29, 30, 32 ರಿಂದ 38 , 47 ರಿಂದ 50, 53, 55 ರಿಂದ 58, 61, 64, 65 ದಾಖಲಾತಿಗಳನ್ನು ಜಪ್ತಿಪಡಿಸಿರುತ್ತೇನೆ. ಹಾಗೆಯೇ ಕ್ರಮಸಂಖ್ಯೆ 4, 134, 156, 174 ರಲ್ಲಿ ನಮೂದಿಸಿದ ರಶೀದಿಗಳನ್ನು ಸಹ ಜಪ್ತಿಪಡಿಸಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಮಹಜರನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-3(ಬಿ)** ಎಂದು ಗುರುತಿಸಲಾಯಿತು. ಸದರಿ ವಶಪಡಿಸಿಕೊಂಡ ದಾಖಲೆಗಳ ಕಡತವನ್ನು **ನಿಪಿ-132** ಎಂದು ಗುರುತಿಸಲಾಯಿತು.

8.ಆರೋಪಿತರ ಮತ್ತು ಕುಟುಂಬದವರ ಮೈಮೇಲೆ ಇದ್ದ ಆಭರಣಗಳನ್ನು ಮೌಲ್ಯಮಾಪನ ಮಾಡಿಸಿ , ಅದರ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿ ಅವರಿಗೆ ಬಿಟ್ಟು ಕೊಟ್ಟಿರುತ್ತೇನೆ. ಮಹಜರು ಕಾಲಕ್ಕೆ 19 ಬಂಗಾರದ ಆಭರಣಗಳು ಮತ್ತು 3 ಬೆಳ್ಳಿಯ ಆಭರಣಗಳನ್ನು ಪುರುಷೋತ್ತಮ ಆಚಾರಿ, ಅಕ್ಕಸಾಲಿಗರವರಿಂದ ಮೌಲ್ಯ ಮಾಪನ ಮಾಡಿಸಿ ಅದನ್ನು ವಶಪಡಿಸಿಕೊಂಡಿರುತ್ತೇನೆ ಹಾಗೂ ಸದರಿ ಸಮಯದಲ್ಲಿ ರೂ.2,55,040 ನಗದನ್ನು ಸಹ ವಶಪಡಿಸಿಕೊಂಡಿರುತ್ತೇನೆ. ಸದರಿ ಆಭರಣ, ಬೆಳ್ಳಿ ಸ್ವತ್ತು ಮತ್ತು ನಗದನ್ನು ನ್ಯಾಯಾಲಯದ ಸುಪರ್ದಿಗೆ ಕೋರಿ ನಿವೇದನೆ ಮಾಡಿದ್ದು ಮತ್ತು ಸ್ವತ್ತುಗಳ ಪರಿಶೀಲನಾ ಪಂಚನಾಮೆಯನ್ನು ಸಾಕ್ಷಿ

ನೋಡಿ ಗುರುತಿಸಿರುತ್ತಾರೆ. ಮಹಜರು ಕಾಲಕ್ಕೆ ಪಿ.ಸಿ ಪ್ರಶಾಂತ್ ರವರಿಂದ ಫೋಟೋ ಮತ್ತು ವಿಡಿಯೋಗ್ರಾಫಿ ಮಾಡಿಸಲಾಗಿತ್ತು. ಸಂಪೂರ್ಣ ಮಹಜರು ಪ್ರಕ್ರಿಯೆಯನ್ನು ಸಂಜೆ 7 ಗಂಟೆಯವರೆಗೆ ಸ್ಥಳದಲ್ಲೇ ಜರುಗಿಸಿರುತ್ತೇನೆ. ಈ ಬಗ್ಗೆ ಒಂದು ಮಹಜರನ್ನು ತಯಾರಿಸಲಾಗಿರುತ್ತದೆ. ಅದರ ಪ್ರತಿಯನ್ನು ಆರೋಪಿತರಿಗೆ ಕೊಟ್ಟು ಸಹಿ ಪಡೆದಿರುತ್ತೇನೆ.

9. ದಿನಾಂಕ 23.12.2016 ರಂದು ಪಿ.ಐ ದಿನಕರ ಶೆಟ್ಟಿ ರವರು ಜಾರಿಗೊಳಿಸಿದ ವಾರೆಂಟ್ ಮತ್ತು ಮಹಜರನ್ನು ಒಂದು ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ವರದಿ ಮತ್ತು ಮಹಜರನ್ನು , **ನಿಪಿ-133** ಮತ್ತು **ನಿಪಿ-134** ಎಂದು ಗುರುತಿಸಲಾಯಿತು. ಶೋಧನಾ ವಾರೆಂಟ್ ಮತ್ತು ಮಹಜರನ್ನು ಪಿ.ಎಫ್ ನೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಪ್ರಕರಣದ ಮಾಹಿತಿಯನ್ನು ಪಡೆಯಲು ಪತ್ರ ವ್ಯವಹಾರವನ್ನು ಮಾಡಿರುತ್ತೇನೆ. ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

10. ದಿನಾಂಕ 27.12.2016 ರಂದು ಸೇಕ್ರೇಟ್ ಹಾರ್ಟ್ ಕಾಲೇಜಿನಿಂದ ಆರೋಪಿತಳ ಮಗಳಾದ ಚೈತ್ರಾಳ ವಿದ್ಯಾಭ್ಯಾಸದ ಮಾಹಿತಿ ಬಂದಿದ್ದು, ಅದರಲ್ಲಿ ನಮೂದಿಸಿದ ರೂ. 13,065 ಹಣವನ್ನು ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-91 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಪ್ರಾಂಶುಪಾಲರು , ಸೇಕ್ರೇಟ್ ಹಾರ್ಟ್ ಕಾಲೇಜಿಗೆ ಮಾಹಿತಿ ಕೋರಿ ಬರೆದ ಪತ್ರವನ್ನು ನೋಡಿ ಗುರುತಿಸಿದ್ದು, ಸದರಿ

ದಾಖಲೆಯನ್ನು **ನಿಪಿ-91(ಬಿ)** ಮತ್ತು ಸಾಕ್ಷಿಯ ಸಹಿಯನ್ನು **ನಿಪಿ-91(ಸಿ)** ಎಂದು ಗುರುತಿಸಲಾಯಿತು.

11.ಆರೋಪಿತರ ಮಗನಾದ ಜ್ಞಾನೇಶ್ ರವರು ಪಿ.ಯುಸಿ ವಿದ್ಯಾಭ್ಯಾಸ ಮಾಡಿದ ವಾಣಿ ಪದವಿ ಕಾಲೇಜಿನಿಂದ ಮಾಹಿತಿ ಬಂದಿದ್ದು, ಅದರಲ್ಲಿ 1ನೇ ಪಿ.ಯುಸಿ ಗೆ ರೂ.12,900 ಮತ್ತು 2ನೇ ಪಿ.ಯುಸಿ ಗೆ ರೂ. 13,120 ನಮೂದು ಇದ್ದು ಅದನ್ನು ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿರುತ್ತದೆ.

12. ದಿನಾಂಕ 30.12.2016 ರಂದು ನಮಿತಾ ಹರೀಶ್ ಹೆಚ್.ಪಿ ಗ್ಯಾಸ್ ಏಜೆನ್ಸಿ ಯಿಂದ ಆರೋಪಿತರು ಉಪಯೋಗಿಸುತ್ತಿದ್ದ ಗ್ಯಾಸ್ ಸಿಲಿಂಡರ್ ಬಗ್ಗೆ ಮಾಹಿತಿ ಬಂದಿದ್ದು, ಅದರಲ್ಲಿ ರೂ. 14,565 ನಮೂದು ಇದ್ದು ಅದನ್ನು ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-16 ಎಂದು ಗುರುತಿಸಲಾಗಿರುತ್ತದೆ.

13. ದಿನಾಂಕ 30.12.2016 ರಂದು ಮಂಜು ಗ್ಯಾಸ್ ಡಿಸ್ಟ್ರಿಬ್ಯೂಟರ್ ಯಿಂದ ಆರೋಪಿತರು ಉಪಯೋಗಿಸುತ್ತಿದ್ದ ಗ್ಯಾಸ್ ಸಿಲಿಂಡರ್ ಬಗ್ಗೆ ಮಾಹಿತಿ ಬಂದಿದ್ದು, ಅದರಲ್ಲಿ ರೂ. 12,439 ನಮೂದು ಇದ್ದು ಅದನ್ನು ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-15 ಎಂದು ಗುರುತಿಸಲಾಗಿರುತ್ತದೆ.

14. ದಿನಾಂಕ 02.01.2017 ರಂದು ಎ.ಇ.ಇ ಮೆಸ್ಕಾಂ ಬೆಳ್ತಂಗಡಿ ರವರಿಂದ, ಆರೋಪಿತರ ಮನೆಯ ವಿದ್ಯುತ್ ಸ್ಥಾವರದ ಬಗ್ಗೆ ಮಾಹಿತಿ ಬಂದಿದ್ದು ಅದರಲ್ಲಿ ರೂ. 83,623 ಬಗ್ಗೆ ನಮೂದು ಇದ್ದು ಅದನ್ನು ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿರುತ್ತದೆ.

15. ದಿನಾಂಕ 06.1.2017 ರಂದು ಆರೋಪಿತರ ಮಗನಾದ ಜ್ಞಾನೇಶ್ ರವರು ಸೆಂಟ್ ಮೇರಿಸ್ ಹಿರಿಯ ಪ್ರಾಥಮಿಕ ಶಾಲೆ ಬೆಳ್ತಂಗಡಿ ಯಲ್ಲಿ ವಿದ್ಯಾಭ್ಯಾಸ ಮಾಡಿದ ಮಾಹಿತಿ ಬಂದಿದ್ದು, ರೂ. 42,033 ನಮೂದು ಇದ್ದು ಅದನ್ನು ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-22 ಎಂದು ಗುರುತಿಸಲಾಗಿರುತ್ತದೆ.

16. ಅದೇ ದಿನ ಪಿ.ಹೆಚ್.ಸಿ ಪುಂಜಾಲಕಟ್ಟೆ ರವರಿಂದ 2ನೇ ಆರೋಪಿತರ ಸಂಬಳದ ವಿವರ ಬಂದಿದ್ದು ಅದರಲ್ಲಿ ರೂ 1,38,236 ನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಮತ್ತು ನಾನು ವಿವರಣೆಯನ್ನು ಕೇಳಿದ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-135** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-135(ಎ)** ಎಂದು ಗುರುತಿಸಲಾಯಿತು.

17. ಅದೇ ದಿನ ಡಿ.ಹೆಚ್.ಒ ಮಂಗಳೂರು ಇವರಿಂದ 2ನೇ ಆರೋಪಿತರ ಸೇವಾ ವಿವರವನ್ನು ಮತ್ತು ಆಸ್ತಿ ಮತ್ತು ಋಣತಖ್ತೆ ವಿವರವನ್ನು ಕೇಳಿ, ಸ್ವೀಕರಿಸಿರುತ್ತೇನೆ. ಅದಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ಸಾಕ್ಷಿ ನೋಡಿ

ಗುರುತಿಸಿದ್ದು, ಅದನ್ನು **ನಿಪಿ-136** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-136(ಎ)** ಎಂದು ಗುರುತಿಸಲಾಯಿತು.

18.ಅದೇ ದಿನ ಆರ್.ಟಿ ಒ ಪುತ್ತೂರು ಇವರಿಂದ ಆರೋಪಿತರಿಗೆ ಸಂಬಂಧಪಟ್ಟ ಮಾರುತಿ ಆಲ್ಟೋ ಕಾರು ಮತ್ತು 2 ಮೋಟಾರುಸೈಕಲ್ ಗಳ ಖರ್ಚಿನ ವಿವರಗಳು ಬಂದಿದ್ದು, ಅದರಲ್ಲಿ ಕಾರಿನ ಮೌಲ್ಯ ರೂ. 1,90,000 ಮತ್ತು ಮೋಟಾರುಸೈಕಲ್ ವೆಚ್ಚ ರೂ.7,995 ಮತ್ತು ಅದರ ಬೆಲೆ ರೂ 57,040 ಮತ್ತು ಇನ್ನೊಂದು ಮೋಟಾರುಸೈಕಲ್ ಬೆಲೆ ರೂ.46,429 ಮತ್ತು ಅದರ ವೆಚ್ಚ ರೂ.5,351 ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ-19 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು **ನಿಪಿ-19(ಎ)** ಎಂದು ಗುರುತಿಸಲಾಯಿತು.

19. ಅದೇ ದಿನ ತಾಲೂಕು ಆಸ್ಪತ್ರೆ ಬೆಳ್ತಂಗಡಿ ಇವರಿಂದ 2ನೇ ಆರೋಪಿಯ ಸಂಬಳದ ಮಾಹಿತಿ ಬಂದಿದ್ದು, ರೂ.5,298 ನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-137** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-137(ಎ)** ಎಂದು ಗುರುತಿಸಲಾಯಿತು.

20. ಬಿ.ಎಸ್.ಎನ್. ಎಲ್ ಕಚೇರಿಯಿಂದ 2ನೇ ಆರೋಪಿತೆಯ ಹೆಸರಿನಲ್ಲಿದ್ದ ಸ್ಥಿರ ದೂರವಾಣೆಯ ವೆಚ್ಚದ ಬಗ್ಗೆ ಮಾಹಿತಿ ಬಂದಿದ್ದು 33021 ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-138** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-138(ಎ)** ಎಂದು ಗುರುತಿಸಲಾಯಿತು.

21. ದಿನಾಂಕ 09.01.2017 ರಂದು ಸಂಗೀತಾ ಮೊಬೈಲ್ ರವರು ಒದಗಿಸಿದ ಆರೋಪಿತರು ಉಪಯೋಗಿಸಿದ 5 ಮೊಬೈಲುಗಳ ದರವನು ನೀಡಿದ್ದು ಅದು ರೂ.43,000 ಆಗಿರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-123 ಮತ್ತು ನಿಪಿ-124 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-123(ಬಿ) ಮತ್ತು ನಿಪಿ-124(ಬಿ)** ಎಂದು ಗುರುತಿಸಲಾಯಿತು.

22. ಅದೇ ದಿನ ಸನ್ ಡೈರೆಕ್ಟ್ ರವರಿಂದ ಆರೋಪಿತರ ಮನೆಯ ಡಿಟಿ ಹೆಚ್ ಬಗ್ಗೆ ರೂ 12,915 ಎಂದು ವರದಿ ಬಂದಿರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-139** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-139(ಎ)** ಎಂದು ಗುರುತಿಸಲಾಯಿತು.

23. ಅದೇ ದಿನ ವಾಣಿ ಪದವಿ ಪೂರ್ವ ಕಾಲೇಜಿನಿಂದ ಆರೋಪಿತರ ಮಗನಾದ ಜ್ಞಾನೇಶ್ ರವರ ಪರೀಕ್ಷೃತ ಬಿಲ್ಲಿನ ಮಾಹಿತಿ ಬಂದಿದ್ದು ಅದರಂತೆ ರೂ 32,260 ನ್ನು ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿರುತ್ತದೆ.

24.ತಹಶೀಲ್ದಾರ್ ಮಂಗಳೂರು ಇವರು 1ನೇ ಆರೋಪಿಯ ವೇತನ ಮಾಹಿತಿ ನೀಡಿದ್ದು ರೂ.6,63,331 ನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-140** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-140(ಎ)** ಎಂದು ಗುರುತಿಸಲಾಯಿತು.

25. ಕೋಟೆಕ್ ಮಹೇಂದ್ರ ರವರು 1ನೇ ಆರೋಪಿಯ ಪಾಲಿಸಿಗೆ ತುಂಬಿದ ಹಣದ ಮಾಹಿತಿ ನೀಡಿದ್ದು, ಅದರಲ್ಲಿದ್ದ ರೂ.41,076 ನ್ನು ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-20 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-20(ಎ)** ಎಂದು ಗುರುತಿಸಲಾಯಿತು.

26. ಸಿಂಡಿಕೇಟ್ ಬ್ಯಾಂಕ್ ಗುರುವಾಯನಕೆರೆ ಇವರು 1ನೇ ಆರೋಪಿಯ ಅಕೌಂಟ್ ಮಾಹಿತಿ ನೀಡಿರುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-11(ಎ)** ಎಂದು ಗುರುತಿಸಲಾಯಿತು.

27. ವಿಜಯ ಬ್ಯಾಂಕ್ ಬೆಳ್ತಂಗಡಿ ಇವರಿಂದ ಖಾತೆಗಳ ಬಗ್ಗೆ ಮಾಹಿತಿ ಬಂದಿದ್ದು ಅದರಲ್ಲಿ ಆರೋಪಿತರ ಮಗಳು ಚೈತ್ರಾ ರವರ ಖಾತೆಯ ಬ್ಯಾಲೆಂಸ್ ರೂ.39,171 ಇದ್ದು , 2ನೇ ಆರೋಪಿತೆಯ ಬ್ಯಾಲೆಂಸ್ ರೂ.63,013 ಇದ್ದು ಅದನ್ನು ಆಸ್ತಿಗೆ ಪರಿಗಣಿಸಲಾಗಿರುತ್ತದೆ.

28. ವಿಜಯ ಕ್ರೆಡಿಟ್ ಕಾಪರೇಟಿವ್ ಸೊಸೈಟಿ ಗುರುವಾಯನಕೆರೆ ಇವರಿಂದ ಮಾಹಿತಿ ಬಂದಿದ್ದು ಅದರಂತೆ ಕುಮಾರಿ ಚೈತ್ರಾ ರವರ 10 ರೂಪಾಯಿಯ ಒಂದು ಶೇರ್ , 2ನೇ ಆರೋಪಿಯ ಎಸ್.ಬಿ ಖಾತೆ ಬ್ಯಾಲೆಂಸ್ ರೂ.7,527 ಇದ್ದು ಮತ್ತು 18 ಎಫ್ . ಡಿ ರ ಒಟ್ಟು ಮೊತ್ತ ರೂ.6,28,547 ಇದ್ದು ಅದನ್ನು ಅವರ ಆಸ್ತಿಗೆ ಪರಿಗಣಿಸಲಾಗಿರುತ್ತದೆ. ಸದರಿ ದಾಖಲೆಗಳನ್ನು ಸಾಕ್ಷಿ

ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-42 ರಿಂದ 59 ಎಂದು ಗುರುತಿಸಲಾಗಿರುತ್ತದೆ.

29. ದಿನಾಂಕ 10.01.2017 ರಂದು ಪಿ.ಹೆಚ್.ಸಿ ಮಂಚಿ, ಬಂಟ್ವಾಳ ಇವರಿಂದ 2ನೇ ಆರೋಪಿಯ ವೇತನದ ಬಗ್ಗೆ ಮಾಹಿತಿ ಬಂದಿದ್ದು, ರೂ.1,47,696 ಇದ್ದು ಅದನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ.

30. ದಿನಾಂಕ 12.01.2017 ರಂದು ಪಿ.ಹೆಚ್.ಸಿ ಪಡಂಗಡಿ ಇವರಿಂದ 2ನೇ ಆರೋಪಿಯ ಆಸ್ತಿ ಮತ್ತು ಋಣ ತಖ್ತೆ (assets and liabilities) ಯ ಮಾಹಿತಿಯನ್ನು ಸ್ವೀಕರಿಸಿರುತ್ತೇನೆ. ದಿನಾಂಕ 13.01.2017 ರಂದು ಆಡಳಿತ ವೈದ್ಯಾಧಿಕಾರಿ ಬೆಳ್ತಂಗಡಿ ಇವರು 2ನೇ ಆರೋಪಿಯ ಯಾವುದೇ assets and liabilities ಇರುವುದಿಲ್ಲ ಎಂದು ವರದಿ ನೀಡಿರುತ್ತಾರೆ.

31. ಯುನೈಟೆಡ್ ಇನ್ಸುರೆನ್ಸ್ ಕಂಪನಿಯವರು 1ನೇ ಆರೋಪಿಯ ಪಾಲಿಸಿ ಮಾಹಿತಿ ನೀಡಿದ್ದು, ರೂ.2,702 ನ್ನು ಅವರ ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಯುನೈಟೆಡ್ ಇನ್ಸುರೆನ್ಸ್ ಕಂಪನಿಯವರು 1ನೇ ಆರೋಪಿಯ ಇನ್ನೊಂದು ಪಾಲಿಸಿ ಮಾಹಿತಿ ನೀಡಿದ್ದು, ರೂ.2,702 ನ್ನು ಅವರ ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-18 ಎಂದು ಗುರುತಿಸಲಾಯಿತು.

32. ದಿನಾಂಕ 13.1.2017 ರಂದು ಆರೋಪಿತರ ಮಗನಾದ ಜ್ಞಾನೇಶ್ ರವರು ಸತ್ಯ ಸಾಯಿ ಲೋಕಸೇವಾ ಹೈಸ್ಕೂಲ್ ಯಲ್ಲಿ ವಿದ್ಯಾಭ್ಯಾಸ ಮಾಡಿದ

ಮಾಹಿತಿ ಬಂದಿದ್ದು, ಅದರಲ್ಲಿ ರೂ. 12,213 ನಮೂದು ಇದ್ದು ಅದನ್ನು ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-23(ಎ)** ಎಂದು ಗುರುತಿಸಲಾಯಿತು.

33. ಎಸ್.ಬಿ.ಎಂ ಬ್ಯಾಂಕಿನ 2ನೇ ಆರೋಪಿಯ ಖಾತೆಯ ವಿವರ ಬಂದಿದ್ದು, ಅದರಲ್ಲಿ ಬ್ಯಾಲೆಂಸ್ ರೂ. 52,973.50 ಇದ್ದು ಅದನ್ನು ಆಸ್ತಿಗೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-12 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-12(ಎ)** ಎಂದು ಗುರುತಿಸಲಾಯಿತು.

34. ದಿನಾಂಕ 19.01.2017 ರಂದು ಪಿ.ಹೆಚ್.ಸಿ ನೆರಿಯಾ ರವರಿಂದ 2ನೇ ಆರೋಪಿಯ ವೇತನದ ಬಗ್ಗೆ ಮಾಹಿತಿ ಬಂದಿದ್ದು, ಅದರಲ್ಲಿ ರೂ.96,384.85 ಇದ್ದು ಅದನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-141** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-141(ಎ)** ಎಂದು ಗುರುತಿಸಲಾಯಿತು.

35. ಆದಾಯ ತೆರಿಗೆ ಅಧಿಕಾರಿ ಮಂಗಳೂರು ಇವರು 1 ಮತ್ತು 2ನೇ ಆರೋಪಿತರಿಗೆ ಈವರೆಗೆ ಯಾವುದೇ ಆದಾಯ ತೆರಿಗೆಯನ್ನು ತುಂಬಿರುವುದಿಲ್ಲ ಎಂದು ಮಾಹಿತಿ ನೀಡಿರುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-142** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-142(ಎ)** ಎಂದು ಗುರುತಿಸಲಾಯಿತು.

36. ಎಲ್.ಐ.ಸಿ ಮಂಗಳೂರು ಇವರಿಂದ ಆರೋಪಿತರ 7 ಪಾಲಿಸಿಗಳ ವಿವರಗಳನ್ನು ಸ್ವೀಕರಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-117 ಮತ್ತು ನಿಪಿ-118 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-117(ಬಿ) ಮತ್ತು ನಿಪಿ-118(ಎ)** ಎಂದು ಗುರುತಿಸಲಾಯಿತು.

37. ದಿನಾಂಕ 27.01.2017 ರಂದು ತಹಶೀಲ್ದಾರ್ ಬೆಳ್ತಂಗಡಿ ರವರಿಂದ 1ನೇ ಆರೋಪಿಯ ವೇತನದ ಬಗ್ಗೆ ಮಾಹಿತಿ ಬಂದಿದ್ದು, ಅದರಲ್ಲಿ ರೂ.12,69,969 ಇದ್ದು ಅದನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-143** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-143(ಎ)** ಎಂದು ಗುರುತಿಸಲಾಯಿತು.

38. ಎಸ್.ಬಿ.ಐ ಬೆಳ್ತಂಗಡಿ ರವರು 1 ಮತ್ತು 2ನೇ ಆರೋಪಿತರು ಮತ್ತು ಅವರ ಇಬ್ಬರು ಮಕ್ಕಳ ಖಾತೆಗಳ ವಿವರಗಳನ್ನು ನೀಡಿದ್ದು, 4 ಖಾತೆಗಳ ಬ್ಯಾಲೆಂಸ್ ರೂ.2,35,662 ಇದ್ದು ಅದನ್ನು ಅವರ ಆಸ್ತಿಗೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-63 ಯಿಂದ ನಿಪಿ-66 ಎಂದು ಗುರುತಿಸಲಾಗಿರುತ್ತದೆ.

39. ಎ.ಇ.ಇ ಮೆಸ್ಕಾಂ ಬೆಳ್ತಂಗಡಿ ರವರಿಂದ ಆರೋಪಿತರ ಮನೆಯ ಬಿಲ್ ನ ವಿವರ ಬಂದಿದ್ದು, ಅದರಲ್ಲಿ ರೂ.14,870 ಇದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು

ಈಗಾಗಲೇ ನಿಪಿ-13 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು **ನಿಪಿ-13(ಎ)** ಎಂದು ಗುರುತಿಸಲಾಯಿತು.

40. ದಿನಾಂಕ 28.01.2017 ರಂದು ತಹಶೀಲ್ದಾರ್ ಬಂಟ್ವಾಳ ರವರಿಂದ 1ನೇ ಆರೋಪಿಯ ವೇತನದ ಬಗ್ಗೆ ಮಾಹಿತಿ ಬಂದಿದ್ದು, ಅದರಲ್ಲಿ ರೂ.7,42,835 ಇದ್ದು ಅದನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-144** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-144(ಎ)** ಎಂದು ಗುರುತಿಸಲಾಯಿತು.

41. ದಿನಾಂಕ 02.02.2017 ರಂದು ಯುನೈಟೆಡ್ ಇನ್ಸುರೆನ್ಸ್ ಕಂಪನಿಯವರು 1ನೇ ಆರೋಪಿಯ ಪಾಲಿಸಿ ಮಾಹಿತಿ ನೀಡಿದ್ದು, ರೂ.1,190 ನ್ನು ಅವರ ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-18 ಎಂದು ಗುರುತಿಸಲಾಯಿತು.

42. ಎಸ್.ಬಿ.ಐ ಬೆಳ್ತಂಗಡಿ ರವರು 2ನೇ ಆರೋಪಿಯ 4 ಸಾಲದ ಖಾತೆಗಳ ವಿವರಗಳನ್ನು ನೀಡಿದ್ದುಅದರಲ್ಲಿ ಆರೋಪಿತರು ಪಾವತಿಸಿದ ಬಡ್ಡಿ ಮೊತ್ತ ರೂ. 3,57,114.37 ಇದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಿರುತ್ತೇನೆ.

43. ದಿನಾಂಕ 07.02.2017 ರಂದು ಪಿ.ಹೆಚ್.ಸಿ ಮುಂಡಾಜೆ ರವರಿಂದ 2ನೇ ಆರೋಪಿಯ ವೇತನದ ಬಗ್ಗೆ ಮಾಹಿತಿ ಬಂದಿದ್ದು, ಅದರಲ್ಲಿ ರೂ.1,40,032 ಇದ್ದು ಅದನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-145** ಎಂದು, ಸಾಕ್ಷಿಯ ಸಹಿಯನ್ನು

**ನಿಪಿ-145(ಎ)** ಎಂದು ಗುರುತಿಸಲಾಯಿತು.

44. ಅದೇ ದಿನ ಪಿ.ಹೆಚ್.ಸಿ ಪಡಂಗಲಿ ರವರಿಂದ 2ನೇ ಆರೋಪಿಯ ವೇತನದ ಬಗ್ಗೆ ಮಾಹಿತಿ ಬಂದಿದ್ದು, ಅದರಲ್ಲಿ ರೂ.33,05,930 ಇದ್ದು ಅದನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-146** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-146(ಎ)** ಎಂದು ಗುರುತಿಸಲಾಯಿತು.

45. ದಿನಾಂಕ 09.02.2017 ರಂದು ಆರೋಪಿತರ ಮಗಳಾದ ಕುಮಾರಿ ಚೈತ್ರ ರವರು ಎಸ್.ಡಿ.ಎಂ ಕಾಲೇಜಿನಲ್ಲಿ ವಿದ್ಯಾಬ್ಯಾಸ ಮಾಡಿದ ಮಾಹಿತಿ ಬಂದಿದ್ದು, ಅದರಲ್ಲಿ ರೂ. 9,123 ನಮೂದು ಇದ್ದು ಅದನ್ನು ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-21 ಎಂದು ಗುರುತಿಸಲಾಗಿರುತ್ತದೆ.

46. ಅದೇ ದಿನ ಸಿಂಡಿಕೇಟ್ ಬ್ಯಾಂಕ್ ವಿಟ್ಲ ರವರಿಂದ 2ನೇ ಆರೋಪಿಯ ಎಸ್.ಬಿ ಖಾತೆಯ ವಿವರ ನೀಡಿದ್ದು, ಅದರಲ್ಲಿ ರೂ. 1,43,007.99 ಇದ್ದು ಅದನ್ನು ಅವರ ಆಸ್ತಿಗೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-10(ಎ)** ಎಂದು ಗುರುತಿಸಲಾಯಿತು.

47. ದಿನಾಂಕ 21.02.2017 ರಂದು ಪಿ.ಡಿ.ಒ ಕುವೆಟ್ಟು ರವರು 2ನೇ ಆರೋಪಿ ಭೂಪರಿವರ್ತನೆಗಾಗಿ ಸಂದಾಯ ಮಾಡಿದ ಮಾಹಿತಿ ನೀಡಿದ್ದು ಅದರಲ್ಲಿ

ರೂ.1,145 ಇದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-40 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-40(ಬಿ)** ಎಂದು ಗುರುತಿಸಲಾಯಿತು.

48. ದಿನಾಂಕ 23.02.2017 ರಂದು ನಿರ್ದೇಶಕರು ಸಹಾಯಕ ತೋಟಗಾರಿಕೆ ಇಲಾಖೆ ರವರು 2ನೇ ಆರೋಪಿಯ ಬಗ್ಗೆ ತೋಟಗಾರಿಕಾ ವೆಚ್ಚ ನೀಡಿದ್ದು, ಅದರಲ್ಲಿ ರೂ. 38,139.38 ಇದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-89 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-89(ಬಿ)** ಎಂದು ಗುರುತಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.

ದಿನಾಂಕಃ **17.10.2025**ರಂದು ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದಃ**

49. ದಿನಾಂಕ 14.03.2017 ರಂದು ಕುವೆಟ್ಟು ಗ್ರಾಮ ಪಂಚಾಯಿತಿಯಿಂದ 2ನೇ ಆರೋಪಿಯು ಪಾವತಿಸಿದ ತೆರಿಗೆಯ ಮಾಹಿತಿ ಬಂದಿದ್ದು, 16,557 ರೂಗಳನ್ನು ಅವರ ವೆಚ್ಚಗೆ ಪರಿಗಣಿಸಲಾಗಿರುತ್ತದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-40 ಎಂದು ಗುರುತಿಸಲಾಗಿರುತ್ತದೆ.

50. ಡಿ.ಹೆಚ್.ಒ ಮಂಗಳೂರು ರವರಿಂದ 2ನೇ ಆರೋಪಿರವರ 2012 ರ ಸ್ಥಿರಾಸ್ತಿ ಮತ್ತು ಚರಾಸ್ತಿ ಪಟ್ಟಿ ಸ್ವೀಕೃತವಾಗಿದ್ದು, ಅದನ್ನು ಪರಿಶೀಲಿಸಲಾಗಿ ಅವರ ಮನೆಯಲ್ಲಿ ಜಪ್ತಿ ಕಾಲಕ್ಕೆ ದೊರೆತ 2012ರ ಸ್ಥಿರಾಸ್ತಿ ಮತ್ತು ಚರಾಸ್ತಿ ಪಟ್ಟಿಗೂ, ಮೇಲೆ ಹೇಳಿದ ಪಟ್ಟಿಗೂ ತುಂಬಾ ವ್ಯತ್ಯಾಸ ಇರುತ್ತದೆ.

51.ದಿನಾಂಕ 18.03.2017 ರಂದು ಧರ್ಮಸ್ಥಳ ಪಿ.ಯು ಕಾಲೇಜಿನಿಂದ ಆರೋಪಿತರ ಮಗಳಾದ ಚೈತ್ರಾ ರವರ ವಿದ್ಯಾಭ್ಯಾಸದ ವೆಚ್ಚ 25,920 ರೂಾಗಳ ಬಗ್ಗೆ ವರದಿ ಬಂದಿದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಗಿದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-21 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-21(ಎ)** ಎಂದು ಗುರುತಿಸಲಾಯಿತು.

52. ದಿನಾಂಕ 20.03.2017 ರಂದು ಅರ್.ಟಿ.ಒ ಮಂಗಳೂರುರವರಿಂದ ಆರೋಪಿತರ ವಾಹನಗಳಾದ ಆಲ್ಟೋ ಕಾರು, ಆ್ಯಕ್ಟಿವಾ ಸ್ಕೂಟರ್ , ಹೊಂಡಾ ಶೈನ್ ಗಳ ಇಂಧನ ಮತ್ತು ನಿರ್ವಹಣಾ ವೆಚ್ಚಗಳ ಬಗ್ಗೆ ರೂ.4,30,807 ಎಂದು ವರದಿ ಬಂದಿದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಗಿದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-19 ಎಂದು ಗುರುತಿಸಲಾಗಿರುತ್ತದೆ.

53. ದಿನಾಂಕ 24.03.2017 ರಂದು ಸಂತ ತೆರೆಜಾ ಹೈಸ್ಕೂಲ್ ಬೆಳ್ತಂಗಡಿಯಿಂದ ಆರೋಪಿತರ ಮಗಳಾದ ಚೈತ್ರಾ ರವರ ವಿದ್ಯಾಭ್ಯಾಸದ ವೆಚ್ಚ ರೂ.15,000 ಗಳ ಬಗ್ಗೆ ವರದಿ ಬಂದಿದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಗಿದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-26 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-26(ಎ)** ಎಂದು ಗುರುತಿಸಲಾಯಿತು.

54. ದಿನಾಂಕ 24.03.2017 ರಂದು ಎ.ಇ.ಇ. ಪಂಚಾಯತ್ ರಾಜ್ ಇಂಜಿನಿಯರಿಂಗ್ ಬೆಳ್ತಂಗಡಿ ರವರಿಂದ ಆರೋಪಿತರ ಕುವೆಟ್ಟು ಗ್ರಾಮದ ಜಮೀನಿನಲಿ ಕೊಳವೆ ಬಾವಿ ಕೊರೆಯಿಸಿದ ವೆಚ್ಚದ ವರದಿ ಬಂದಿದ್ದು, ಅದರಲ್ಲಿ ರೂ.2,41,185 ಇದ್ದು, ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಗಿದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-14(ಎ)** ಎಂದು ಗುರುತಿಸಲಾಯಿತು.

33155. ದಿನಾಂಕ 01.04.2017 ರಂದು ಐಡಿಯಾ ಕಂಪನಿಯಿಂದ ಆರೋಪಿತರ ಮೊಬೈಲ್ ನಂಬ್ರ 8722377458 ನಂಬರಿಗೆ ರಿಚಾರ್ಜ್ ಆದ ಮೊತ್ತ ರೂ.27,240 ಇದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಗಿದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-147** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-147(ಎ)** ಎಂದು ಗುರುತಿಸಲಾಯಿತು. ಅದೇ ರೀತಿ ಬಿ.ಎಸ್.ಎನ್.ಎಲ್ ನಿಂದ ಮೊಬೈಲ್ ನಂಬ್ರ 9448153209 ಮತ್ತು 9481375091 ನಂಬರಿಗೆ ರಿಚಾರ್ಜ್ ಆದ ಮೊತ್ತ ರೂ.3,921 ಇದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಗಿದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-96 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-96(ಎ)** ಎಂದು ಗುರುತಿಸಲಾಯಿತು.

56. ದಿನಾಂಕ 04.04.2017 ರಂದು 1ನೇ ಆರೋಪಿತರಾದ ಗೋವಿಂದ ನಾಯಕ್ ರ 02800005294 ಮತ್ತು 2ನೇ ಆರೋಪಿತರ 0280000628 ನೋಂದಣಿಗಾಗಿ ಕರ್ನಾಟಕ ಗೃಹ ಮಂಡಳಿಗೆ ಪಾವತಿ ಮಾಡಿದ ವೆಚ್ಚ ರೂ. 2,000 ಗಳನ್ನು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಗಿದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-28 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-28(ಎ)** ಎಂದು ಗುರುತಿಸಲಾಯಿತು.

57. ದಿನಾಂಕ 05.04.2017 ರಂದು ಚರ್ಚ್ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಬೆಳ್ತಂಗಡಿಯಿಂದ ಆರೋಪಿತರ ಮಗಳಾದ ಚೈತ್ರಾ ರವರ ವಿದ್ಯಾಭ್ಯಾಸದ ವೆಚ್ಚ ರೂ.795 ಗಳ ಬಗ್ಗೆ ವರದಿ ಬಂದಿದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಗಿದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-27 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-27(ಎ)** ಎಂದು ಗುರುತಿಸಲಾಯಿತು.

58. ದಿನಾಂಕ 06.04.2017 ರಂದು ಕೆ.ಜೆ.ಐ.ಡಿ ಮಂಗಳೂರಿನಿಂದ 1 ಮತ್ತು 2ನೇ ಆರೋಪಿತರು ಪಡೆದುಕೊಂಡ ಸಾಲದ ಮಾಹಿತಿ ಸ್ವೀಕರಿಸಿರುತ್ತೇನೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-107 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-107(ಬಿ)** ಎಂದು ಗುರುತಿಸಲಾಯಿತು.

59. ದಿನಾಂಕ 10.04.2017 ರಂದು ಆರೋಪಿತರ ಹೆಸರಿನಲ್ಲಿದ್ದ ಕುವೆಟ್ಟು ಗ್ರಾಮದ ಕಟ್ಟಡದ ಬಗ್ಗೆ ಗ್ರಾಮ ಪಂಚಾಯಿತಿಯಿಂದ ವರದಿ ನೀಡಿರುತ್ತಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-41 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-41(ಬಿ)** ಎಂದು ಗುರುತಿಸಲಾಯಿತು.

60. ಆರೋಪಿತರು ಮತ್ತು ಅವರ ಮಕ್ಕಳ ಹೆಸರಿನಲ್ಲಿರುವ ಸೈಟುಗಳ ವರದಿಯಿಂದ ತಾಲೂಕುಪಂಚಾಯಿತಿ ಬೆಳ್ತಂಗಡಿಯವರು ನೀಡಿರುತ್ತಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-148**

ಎಂದು, ಸಾಕ್ಷಿಯ ಸಹಿಯನ್ನು **ನಿಪಿ-148(ಎ)** ಎಂದು ಗುರುತಿಸಲಾಯಿತು.

61. ದಿನಾಂಕ 13.04.2017 ರಂದು ಉಪನೋಂದಣಾಧಿಕಾರಿ ಬೆಳ್ತಂಗಡಿರವರು 2ನೇ ಆರೋಪಿತರ ಹೆಸರಿನಲ್ಲಿದ್ದ ಸರ್ವೇ ನಂಬ್ರ 123/3ಬಿ ರ ಕ್ರಯಪತ್ರವನ್ನು ನೀಡಿರುತ್ತಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-8(ಎ)** ಎಂದು ಗುರುತಿಸಲಾಯಿತು.

62. ವೈದ್ಯಾಧಿಕಾರಿಗಳು ಪಿ.ಹೆಚ್.ಸಿ ಪುಂಜಾಲ್ ಕಟ್ಟೆ ರವರು 2ನೇ ಆರೋಪಿತರು ತೆಗೆದುಕೊಂಡು ಕೆ.ಜೆ.ಐ.ಡಿ ಸಾಲ ಮತ್ತು ಮರುಪಾವತಿಯ ಬಗ್ಗೆ ವರದಿ ನೀಡಿದ್ದು, ಪಾವತಿಸಲು ಬಾಕಿ ಇದ್ದ ರೂ.37,590 ಗಳನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-32 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-32(ಎ)** ಎಂದು ಗುರುತಿಸಲಾಯಿತು.

63. ಕೆ.ಜೆ.ಐ.ಡಿ ಮಂಗಳೂರು ರವರು 1ನೇ ಆರೋಪಿತರು ತೆಗೆದುಕೊಂಡು ಕೆ.ಜೆ.ಐ.ಡಿ ಸಾಲ ಮತ್ತು ಮರುಪಾವತಿಯ ಬಗ್ಗೆ ವರದಿ ನೀಡಿದ್ದು, ಪಾವತಿಸಲು ಬಾಕಿ ಇದ್ದ ರೂ.1,150 ಗಳನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-107 ಎಂದು ಗುರುತಿಸಲಾಗಿರುತ್ತದೆ.

64. ಉಪನೋಂದಣಾಧಿಕಾರಿ ಪುತ್ತೂರುರವರು ಎಸ್.ಆರ್ ನಂಬ್ರ 1303-0506 ಪತ್ರದ ದೃಢೀಕೃತ ಪ್ರತಿ ನೀಡಿರುತ್ತಾರೆ. ದಿನಾಂಕ 05.05.2017 ರಂದು ತಹಶೀಲ್ದಾರ್ ಪುತ್ತೂರು ರವರು ಸರ್ವೆ ನಂಬ್ರ 342/1ಎ , 342/1ಬಿ ಜಮೀನಿನ ವಿವರ ನೀಡಿದ್ದು ,ಸದರಿ ಜಮೀನು ವೆಂಕಪ್ಪ ನಾಯಕ್ ರವರ ಹೆಸರಿನಲ್ಲಿ ಇರುತ್ತದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-111 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-111(ಎ)** ಎಂದು ಗುರುತಿಸಲಾಯಿತು.

65. ದಿನಾಂಕ 05.05.2017 ರಂದು ತಹಶೀಲ್ದಾರ್ ಪುತ್ತೂರು ಕೆಮಿಂಜೆ ಗ್ರಾಮದ ಸರ್ವೆ ನಂಬ್ರ 257/1ಪಿ3 ಜಮೀನಿನ ವಿವರ ನೀಡಿದ್ದು ,ಸದರಿ ಜಮೀನು 1ನೇ ಆರೋಪಿಯ ಹೆಸರಿನಲ್ಲಿ ಇರುತ್ತದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-149** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-149(ಎ)** ಎಂದು ಗುರುತಿಸಲಾಯಿತು.

66. ದಿನಾಂಕ 05.05.2017 ರಂದು ತಹಶೀಲ್ದಾರ್ ಬೆಳ್ತಂಗಡಿ, ಕುವೆಟ್ಟು ಗ್ರಾಮದ ಸರ್ವೆ ನಂಬ್ರ 123/3ಬಿ ಜಮೀನಿನ ವಿವರ ನೀಡಿದ್ದು ,ಸದರಿ ಜಮೀನು 2ನೇ ಆರೋಪಿಯ ಹೆಸರಿನಲ್ಲಿ ಇರುತ್ತದೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-150** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-150(ಎ)** ಎಂದು ಗುರುತಿಸಲಾಯಿತು.

67. ದಿನಾಂಕ 05.05.2017 ರಂದು ಪದ್ಮಶ್ರೀ ಗ್ಯಾಸ್ ಏಜೆನ್ಸಿ ಮೂಡಬಿದ್ರೆ ರವರು 1ನೇ ಆರೋಪಿಯ ಹೆಸರಿನಲ್ಲಿ ಇದ್ದ ಗ್ರಾಹಕ ಸಂಖ್ಯೆ 619473 ಇದ್ದ ದಾಖಲಾತಿಗಳನ್ನು ನೀಡಿರುತ್ತಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-17 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-17(ಎ)** ಎಂದು ಗುರುತಿಸಲಾಯಿತು.

68. ದಿನಾಂಕ 23.05.2017 ರಂದು ಚಾಸಾ-8, 12, 13, 26, 31 ಮತ್ತು 32 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

69. ದಿನಾಂಕ 08.06.2017 ರಂದು ಎಸ್.ಬಿ.ಐ ಬೆಳ್ತಂಗಡಿರವರಿಂದ 2ನೇ ಆರೋಪಿತರ ಸಾಲದ ಖಾತೆಯ ಮಾಹಿತಿ ಬಂದಿದ್ದು, ಪಾವತಿಸಿದ ಬಡ್ಡಿ ರೂ.25,242 ಇದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಿರುತ್ತೇನೆ.

70. ಅದೇ ದಿನ ವಿಜಯಾ ಕ್ರೆಡಿಟ್ ಕಾಪರೇಟಿವ್ ಸೊಸೈಟಿ ಗುರುವಾಯನಕೆರೆ ರವರಿಂದ 2ನೇ ಆರೋಪಿ ಮತ್ತು ಅವರ ಮಗಳಾದ ಚೈತ್ರಾ ರವರ 15 ಡೆಪೊಸಿಟ್ ಗಳ ವರದಿಯನ್ನು ಪಡೆದಿರುತ್ತೇನೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-42 ರಿಂದ ನಿಪಿ-59 ಎಂದು ಗುರುತಿಸಲಾಗಿರುತ್ತದೆ.

71. ದಿನಾಂಕ 28.06.2017 ರಂದು ಇ.ಇ, ಎ.ಸಿ.ಬಿ. ಬೆಂಗಳೂರು (ಚಾಸಾ-68) ರವರು 2ನೇ ಆರೋಪಿಯ ಮನೆಯನ್ನು ತೋರಿಸಲು ಅಧಿಕಾರಿಗಳನ್ನು ನೇಮಿಸಲು ತಿಳಿಸಿದಂತೆ ಪೋಲಿಸ್ ಇನ್ಸ್ ಪೆಕ್ಟರ್ ಯೋಗಿಶ್ ಕುಮಾರ್ ಮತ್ತು

ಸಿಬ್ಬಂದಿಗಳನ್ನು ನೇಮಿಸಿ ಕಳುಹಿಸಿಕೊಟ್ಟಿರುತ್ತೇನೆ. ಪೋಲಿಸ್ ಇನ್ಸ್ ಪೆಕ್ಟರ್ ಯೋಗಿಶ್ ಕುಮಾರ್ ರಂದು ಮರಳಿ ಬಂದು ಮಹಜರನ್ನು ತಂದು ಕೊಟ್ಟಿರುತ್ತಾರೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-73ರಿಂದ ನಿಪಿ-86 ಎಂದು ಗುರುತಿಸಲಾಗಿರುತ್ತದೆ.

72. ದಿನಾಂಕ 14.07.2017 ರಂದು 1ನೇ ಆರೋಪಿತರ ತಾಯಿ ಶ್ರೀಮತಿ ಕಮಲರವರ ಬಿ.ಪಿ.ಎಲ್ ಕಾರ್ಡ್ ನ ಬಗ್ಗೆ ವರದಿಯನ್ನು ತಹಶೀಲ್ದಾರ್ ಪುತ್ತೂರುರವರು ನೀಡಿರುತ್ತಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-109 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-109(ಬಿ)** ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-10 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ.

73. ದಿನಾಂಕ 31.10.2017 ರಂದು 1ನೇ ಆರೋಪಿಯು ಶೆಡ್ಯೂಲ್ -1 ರಿಂದ 23 ಯನ್ನು ನನಗೆ ಸಲ್ಲಿಸಿರುತ್ತಾರೆ. ಸದರಿ ದಾಖಲೆಗಳು ಮೂರು ಪ್ರತ್ಯೇಕ VOLUME 1, 2 AND 3 ರಲ್ಲಿ ಇದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾರೆಯಾಗಿ **ನಿಪಿ-151** ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಿಗೆ ಸಂಬಂಧಪಟ್ಟ ದಿನಾಂಕ 23.12.2016 ರ ಪತ್ರವನ್ನು ನೀಡಿರುತ್ತಾರೆ. ಸದರಿ ಶೆಡ್ಯೂಲ್ ನಲ್ಲಿ ಪಡೆದುಕೊಂಡ ಬಾಡಿಗೆ ಆದಾಯ ರೂ.55,95,000 ಎಂದು ನಮೂದಿಸಿದ್ದು, ಆದರೆ ಅವರು ಪಡೆದುಕೊಂಡ ಆದಾಯವನ್ನು ಕೂಡಿದಾಗ ಅದು ರೂ.5,59,500 ಆಗಿರುತ್ತದೆ. ಇದರಿಂದ 50,00,000 ರೂಗಳ ಬಗ್ಗೆ ತಪ್ಪು ಮಾಹಿತಿ ನೀಡಿರುವುದಾಗಿ ಕಂಡು ಬಂದಿರುತ್ತದೆ.

74. ದಿನಾಂಕ 15.11.2017 ರಂದು 2ನೇ ಆರೋಪಿತರ ಶೆಡ್ಯೂಲ್ 1-23 ವೈದ್ಯಾಧಿಕಾರಿ ಪುಂಜಾಲುಕಟ್ಟೆ ರವರು ಕಳುಹಿಸಿಕೊಟ್ಟಿರುತ್ತಾರೆ. 1 ಮತ್ತು 2ನೇ ಆರೋಪಿತರ ಶೆಡ್ಯೂಲ್ ಒಂದೇ ರೀತಿ ಆಗಿರುತ್ತದೆ.

75. ದಿನಾಂಕ 23.11.2017 ರಂದು ನರಿಕೊಂಬು ಗ್ರಾಮ ಪಂಚಾಯಿತಿಯಿಂದ ಶಂಬೂರು ಗ್ರಾಮದಲ್ಲಿರುವ 1ನೇ ಆರೋಪಿತರು ಖರೀದಿಸಿದ ಸರ್ವೇ ನಂಬ್ರ 83/2ಬಿ ಜಮೀನಿನ ಮಾಹಿತಿ ಬಂದಿದ್ದು, ಖರೀದಿ ಬೆಲೆ ರೂ.2,10,000 ಆಗಿದ್ದು ಅದನ್ನು ಆಸ್ತಿಗೆ ಪರಿಗಣಿಸಿರುತ್ತೇನೆ. ಅದಕ್ಕೆ ಪಾವತಿಸಿದ ಮುಂದ್ರಾಂಕ ಶುಲ್ಕ ರೂ. 11,865, ನೊಂದಣಿ ಶುಲ್ಕ ರೂ. 2,490 ಆಗಿದ್ದು ಅವರ ವೆಚ್ಚಕ್ಕೆ ಪರಿಗಣಿಸಿರುತ್ತೇನೆ. ಪಿ.ಡಿ.ಒ ರವರಿಗೆ ಕೊಟ್ಟ ನೋಟಿಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-87 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-87(ಎ)** ಎಂದು ಗುರುತಿಸಲಾಯಿತು. ಪಿ.ಡಿ.ಒ ರವರು ಕೊಟ್ಟ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-88 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-88(ಎ) ಎಂದು** ಗುರುತಿಸಲಾಯಿತು.

76. ದಿನಾಂಕ 18.12.2017 ರಂದು ತಹಶೀಲ್ದಾರ್ ಪುತ್ತೂರು ರವರು ಬಲ್ನಾಡು ಗ್ರಾಮದ ಸರ್ವೇ ನಂಬ್ರ 342 ರ ಆರ್.ಟಿ.ಸಿ ಗಳನ್ನು ಒದಗಿಸಿರುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-111 ಎಂದು ಗುರುತಿಸಲಾಗಿರುತ್ತದೆ.

77. ಅದೇ ದಿನ ತಹಶೀಲ್ದಾರ್ ಪುತ್ತೂರು ರವರು 1ನೇ ಆರೋಪಿಯ ತಾಯಿ ಶ್ರೀಮತಿ ಕಮಲರವರು ಬಿ.ಪಿ.ಎಲ್ ಕಾರ್ಡಿಗಾಗಿ ಸಲ್ಲಿಸಿದ ಅರ್ಜಿಗಳ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-109 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಪಿ.ಡಿ.ಒ ಬಲ್ನಾಡುರವರು 1ನೇ ಆರೋಪಿಯ ತಾಯಿ ಶ್ರೀಮತಿ ಕಮಲರವರು ಬಿ.ಪಿ.ಎಲ್ ಕಾರ್ಡಿಗಾಗಿ ಸಲ್ಲಿಸಿದ ಅರ್ಜಿಗಳ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-29 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-29(ಎ) ಎಂದು** ಗುರುತಿಸಲಾಯಿತು.

78. ದಿನಾಂಕ 03.01.2018 ರಂದು ಬಲ್ನಾಡು ಗ್ರಾಮದ ಸರ್ವೇ ನಂಬ್ರ 342 ರಲ್ಲಿ ಆರೋಪಿತರ ತೋಟಗಾರಿಕಾ ಬೆಳೆ ಇದ್ದ ಸ್ಥಳದ ಪರಿಶೀಲನೆಯನ್ನು ಹೊಳೆಬಸಪ್ಪ ಸಹಾಯಕ ತೋಟಗಾರಿಕಾ ನಿರ್ದೇಶಕರು ಮತ್ತು ಗ್ರಾಮಕರಣೀಕರು ಬಲ್ನಾಡುರವರು ಮಾಡಿರುತ್ತಾರೆ.

79. ದಿನಾಂಕ 20.01.2018 ರಂದು ಚಾಸಾ-23, 27,34, 16, 33, 24, 35, 30, 28, 14, 12 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 25.01.2018 ರಂದು ಚಾಸಾ-9, 15, 22, 25, 36 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

80. ದಿನಾಂಕ 16.02.2018 ರಂದು ಎಸ್.ಬಿ.ಐ ಬೆಳ್ತಂಗಡಿರವರು 1 ಮತ್ತು 2ನೇ ಆರೋಪಿತರ ಸಾಲದ ಖಾತೆಗಳಿಗೆ ಪಾವತಿಸಿದ ಬಡ್ಡಿಗಳ ವಿವರ ನೀಡಿರುತ್ತಾರೆ. ಅದರಲ್ಲಿ ರೂ.2,40,199 , ರೂ.27,809 , ರೂ.11,117 ಗಳನ್ನು

ಅವರ ವೆಚ್ಚಕ್ಕೆ ಪರಿಗಣಿಸಲಾಯಿತು.

81. ದಿನಾಂಕ 16.02.2018 ರಂದು ಎಸ್.ಬಿ.ಐ ಬಂಟ್ವಾಳ ರವರು 1ನೇ ಆರೋಪಿತರ ಸಾಲದ ಖಾತೆಗಳಿಗೆ ಪಾವತಿಸಿದ ಬಡ್ಡಿಗಳ ವಿವರ ನೀಡಿರುತ್ತಾರೆ. ಅದರಲ್ಲಿ ರೂ.79,256 ನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಯಿತು. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-121 ಮತ್ತು 122 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-121(ಬಿ) ಮತ್ತು 122(ಬಿ) ಎಂದು** ಗುರುತಿಸಲಾಯಿತು. ಅದೇ ದಿನ ಚಾಸಾ-51 ಮತ್ತು ಚಾಸಾ-56 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

82. ದಿನಾಂಕ 17.02.2018 ರಂದು ಚಾಸಾ-50, 53, 57 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಎಸ್.ಬಿ.ಐ ಬೆಳ್ತಂಗಡಿರವರು 1ನೇ ಆರೋಪಿತರ ಸಾಲದ ಖಾತೆಗಳಿಗೆ ಪಾವತಿಸಿದ ಬಡ್ಡಿಗಳ ವಿವರ ನೀಡಿರುತ್ತಾರೆ. ಅದರಲ್ಲಿ ರೂ.12,669 ನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಯಿತು. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-31 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-31(ಎ) ಎಂದು** ಗುರುತಿಸಲಾಯಿತು.

83. ದಿನಾಂಕ 19.02.2018 ರಂದು ಚಾಸಾ-52 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 20.02.2018 ರಂದು ಚಾಸಾ-55 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

84. ದಿನಾಂಕ 24.02.2018 ರಂದು ಚಾಸಾ-50 ರವರ ಖಾತಾ ಮಾಹಿತಿಯನ್ನು ಕೆನರಾ ಬ್ಯಾಂಕ್ ಬಲ್ನಾಡು ರವರು ನೀಡಿರುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-34 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು**ನಿಪಿ-34(ಎ) ಎಂದು** ಗುರುತಿಸಲಾಯಿತು.

85. ದಿನಾಂಕ 01.03.2018 ರಂದು ಕೆ.ಜೆ.ಐ.ಡಿ ಮಂಗಳೂರು ರವರು 1 ಮತ್ತು 2ನೇ ಆರೋಪಿತರ ಸಾಲದ ಮಾಹಿತಿಯನ್ನು ನೀಡಿದ್ದು ಅದರಲ್ಲಿ 1ನೇ ಆರೋಪಿತರು ಪಾವತಿಸಿದ ರೂ.8,160 ಮತ್ತು 2ನೇ ಆರೋಪಿತರು ಪಾವತಿಸಿದ ರೂ.10,172 ಗಳನ್ನು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಯಿತು. ಪಾವತಿಸಲು ಬಾಕಿ ಇದ್ದ 1ನೇ ಆರೋಪಿತರ ರೂ.1,150 ಮತ್ತು 2ನೇ ಆರೋಪಿತರ ರೂ.35,800 ಗಳನ್ನು ಅವರ ಆದಾಯಕ್ಕೆ ಪರಿಗಣಿಸಲಾಯಿತು. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-107 ಎಂದು ಗುರುತಿಸಲಾಗಿರುತ್ತದೆ.

86. ಅದೇ ದಿನ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ, ವಿಕಾಸ ವಿವಿದೋದ್ದೇಶ ಸಹಕಾರಿ ಸಂಘ ಗುರುವಾಯನಕೆರೆರವರು ಇ.ಸ್ಟ್ಯಾಂಪ್ ವರದಿ ನೀಡಿದ್ದು, ಅದರಲ್ಲಿ ವನಜಾಕ್ಷಿ ರವರ ಅರ್ಜಿಗೆ 2ನೇ ಆರೋಪಿತೆ ಲೀಲಾವತಿರವರ ಸಹಿ ಇದ್ದು, ಕೇಶವರವರ ಅರ್ಜಿಗೆ 1ನೇ ಆರೋಪಿಯ ಸಹಿ ಇರುತ್ತದೆ. ಸತೀಶ್ ಕುಮಾರ ರವರ ಅರ್ಜಿಗೆ 2ನೇ ಆರೋಪಿತೆ ಲೀಲಾವತಿರವರ ಸಹಿ ಇರುತ್ತದೆ. ಮೊಹಮ್ಮದ್ ಶರೀಫ್ ರವರ ಅರ್ಜಿಗೆ 1ನೇ ಆರೋಪಿಯ ಸಹಿ ಇರುತ್ತದೆ. ಸುಂದರ್ ರವರ ಅರ್ಜಿಗೆ 2ನೇ ಆರೋಪಿತೆಯ ಸಹಿ ಇರುತ್ತದೆ. ಇದರಿಂದ ಆರೋಪಿತರುಗಳು

ಇ.ಸ್ಟ್ಯಾಂಪ್ ಖರೀದಿ ಮಾಡಿ ಅಫಿದಾವಿತ್ ಗಳಿಗೆ ಸಾಕ್ಷಿದಾರರಿಂದ ಸಹಿ ಮಾಡಿಸಿಕೊಂಡಿರುವುದಾಗಿ ಕಂಡು ಬಂದಿರುತ್ತದೆ. ಸದರಿ ದಾಖಲೆಗಳನ್ನು ಈಗಾಗಲೇ ನಿಪಿ-120 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-120(ಎ) ಎಂದು** ಗುರುತಿಸಲಾಯಿತು.

87. ದಿನಾಂಕ 07.03.2018 ರಂದು ಎಲ್.ಐ.ಸಿ ಪಾಲಿಸಿಗಳಲ್ಲಿ 2ನೇ ಆರೋಪಿ ಪಡೆದ ಮೊತ್ತಗಳಾದ ರೂ.46,111, ರೂ.19,622, ರೂ.13,937 ಮತ್ತು ರೂ.79,670 ಇದ್ದು, ಅದನ್ನು 2ನೇ ಆರೋಪಿಯ ಆದಾಯಕ್ಕೆ ಪರಿಗಣಿಸಲಾಯಿತು. ಸದರಿ ದಾಖಲೆಗಳನ್ನು **ನಿಪಿ-152** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-152(ಎ) ಎಂದು** ಗುರುತಿಸಲಾಯಿತು.

88. ದಿನಾಂಕ 07.03.2018 ರಂದು ವಾಣಿ ಪಿ.ಯು ಕಾಲೇಜು ರವರು ಆರೋಪಿತರ ಮಗನಾದ ಜ್ಞಾನೇಶ್ ನ ಅಡ್ಮಿಷನ್ ದಾಖಲಾತಿ ನೀಡಿದ್ದು, ಅದರಲ್ಲಿ 1ನೇ ಪಿಯು ದಾಖಲಾತಿಯಲ್ಲಿ ಪೋಷಕರ ಆದಾಯ ರೂ.4 ಲಕ್ಷ ಎಂದು ಇದ್ದು, 2ನೇ ಪಿಯು ದಾಖಲಾತಿಯಲ್ಲಿ ರುಾ.6 ಲಕ್ಷ ಎಂದು ನಮೂದು ಇರುತ್ತದೆ. ಎರಡು ದಾಖಲಾತಿಗಳಲ್ಲಿ 1ನೇ ಆರೋಪಿಯ ಸಹಿ ಇರುತ್ತದೆ. ಅದಕ್ಕೆ ಸಂಬಂಧಿಸಿದ ದಿನಾಂಕ 06.03.2018 ರ ಪತ್ರವನ್ನು **ನಿಪಿ-153** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-153(ಎ) ಎಂದು** ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ 1ನೇ ಪಿಯು ದಾಖಲಾತಿಯನ್ನು **ನಿಪಿ-154** ಎಂದು ಮತ್ತು 2ನೇ ಪಿಯು ದಾಖಲಾತಿ ಅರ್ಜಿಯನ್ನು **ನಿಪಿ-155** ಎಂದು ಗುರುತಿಸಲಾಯಿತು.

89. ದಿನಾಂಕ 08.03.2018 ರಂದು ಚರ್ಚ್ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ರವರು ಆರೋಪಿತರ ಮಗಳಾದ ಕುಮಾರಿ ಚೈತ್ರಾ ಳ ಅಡ್ಮಿಷನ್ ದಾಖಲಾತಿ ನೀಡಿದ್ದು, ಅದರಲ್ಲಿ ಪೋಷಕರ ಆದಾಯ ರೂ.75,000 ಎಂದು ಇದ್ದು, ಅದರಲ್ಲಿ 1ನೇ ಆರೋಪಿಯ ಸಹಿ ಇರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು **ನಿಪಿ-156** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-156(ಎ) ಎಂದು** ಗುರುತಿಸಲಾಯಿತು.

90. ದಿನಾಂಕ 08.03.2018 ರಂದು ಸತ್ಯ ಸಾಯಿ ಲೋಕ ಸೇವಾ ಪ್ರೌಢ ಶಾಲೆ ಯವರು ಆರೋಪಿತರ ಮಗನಾದ ಜ್ಞಾನೇಶ್ ನ ಅಡ್ಮಿಷನ್ ದಾಖಲಾತಿ ನೀಡಿದ್ದು, ಅದರಲ್ಲಿ ಪೋಷಕರ ಆದಾಯ ರೂ.2,50,000 ಎಂದು ಇದ್ದು, ಅದರಲ್ಲಿ 1ನೇ ಆರೋಪಿಯ ಸಹಿ ಇರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು **ನಿಪಿ-157** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-157(ಎ) ಎಂದು** ಗುರುತಿಸಲಾಯಿತು.

91. ದಿನಾಂಕ 08.03.2018 ರಂದು ಸಂತ ತೆರೆಜಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ರವರು ಆರೋಪಿತರ ಮಗಳಾದ ಕುಮಾರಿ ಚೈತ್ರಾ ಳ ಅಡ್ಮಿಷನ್ ದಾಖಲಾತಿ ನೀಡಿದ್ದು, ಅದರಲ್ಲಿ ಪೋಷಕರ ಆದಾಯ ರೂ.1,50,000 ಎಂದು ಇದ್ದು, ಅದರಲ್ಲಿ 1ನೇ ಆರೋಪಿಯ ಸಹಿ ಇರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು **ನಿಪಿ-158** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-158(ಎ) ಎಂದು** ಗುರುತಿಸಲಾಯಿತು.

92. ದಿನಾಂಕ 12.03.2018 ರಂದು ಸೇಕ್ರೇಡ್ ಹಾರ್ಟ್ ಕಾಲೇಜಿನವರು ಆರೋಪಿತರ ಮಗಳಾದ ಕುಮಾರಿ ಚೈತ್ರಾ ಳ ಅಡ್ಮಿಷನ್ ದಾಖಲಾತಿ ನೀಡಿದ್ದು, ಅದರಲ್ಲಿ ಪೋಷಕರ ಆದಾಯ ರೂ.2,50,000 ಎಂದು ಇದ್ದು, ಅದರಲ್ಲಿ ಚೈತ್ರಾರವರ ಸಹಿ ಇರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು **ನಿಪಿ-159** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-159(ಎ) ಎಂದು** ಗುರುತಿಸಲಾಯಿತು.

93. ದಿನಾಂಕ 14.03.2018 ರಂದು ಕರ್ನಾಟಕ ಬ್ಯಾಂಕ್ , ಮಿನರ್ವಾ ಬ್ರಾಂಚ್ ರವರಿಂದ 2ನೇ ಆರೋಪಿಗೆ ಸಾಲ ನೀಡಿದ್ದೆ ಎಂದು ದಾಖಲಾತಿ ಸಲ್ಲಿಸಿದ ಅರುಣ್ ಕುಮಾರ್ ರವರ ಬ್ಯಾಂಕ್ ದಾಖಲಾತಿಗಳನ್ನು ಪಡೆದಿರುತ್ತೇನೆ. ಒಂದು ಖಾತೆಯಲ್ಲಿ 530 ರೂಗಳು ಬ್ಯಾಲೆಂಸ್ ಇದ್ದು, ಇನ್ನೊಂದು ಖಾತೆಯಲ್ಲಿ 5,500 ರೂಾಗಳು ಬ್ಯಾಲೆಂಸ್ ಇದ್ದು, ಇನ್ನೊಂದು ಖಾತೆಯಲ್ಲಿ ಹಲವರಿಗೆ ಚೆಕ್ ಮೂಲಕ ಹಣ ನೀಡಿರುವ ಬಗ್ಗೆ ಮಾಹಿತಿ ಇದ್ದು, ಆದರೆ ಅವರ ಅಫಿದಾವಿತ್ ನಲ್ಲಿ ನಮೂದಿಸಿದಂತೆ ಅವರ ಯಾವುದೇ ಉಳಿತಾಯ ಖಾತೆಯಿಂದ 2ನೇ ಆರೋಪಿಗೆ ದಿನಾಂಕ 04.03.2015 ರಂದು 2ನೇ ಆರೋಪಿಗೆ ರೂ.4 ಲಕ್ಷ ಸಂದಾಯವಾಗಿರುವ ಬಗ್ಗೆ ಕಂಡು ಬಂದಿರುವುದಿಲ್ಲ, ಇದರಿಂದ ಅವರು ಸುಳ್ಳು ಅಫಿದಾವಿತ್ ಸಲ್ಲಿಸಿರುವ ಬಗ್ಗೆ ದೃಡಪಟ್ಟಿರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು **ನಿಪಿ-160** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-160(ಎ) ಎಂದು** ಗುರುತಿಸಲಾಯಿತು.

94. ದಿನಾಂಕ 15.03.2018 ರಂದು ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ರವರು ಆರೋಪಿತರ ಮಗಳಾದ ಕುಮಾರಿ ಚೈತ್ರಾ ಳ ಅಡ್ಮಿಷನ್

ದಾಖಲಾತಿ ನೀಡಿದ್ದು, ಅದರಲ್ಲಿ 1ನೇ ದಾಖಲಾತಿಯಲ್ಲಿ ಪೋಷಕರ ಆದಾಯ ರೂ.1 ಲಕ್ಷ ಎಂದು ಇದ್ದು, 2ನೇ ದಾಖಲಾತಿಯಲ್ಲಿ ರೂ.75,000 ಎಂದು ನಮೂದು ಇದ್ದು ಅದರಲ್ಲಿ ಚೈತ್ರಾಳ ಸಹಿ ಇರುತ್ತದೆ. 1ನೇ ದಾಖಲಾತಿಯಲ್ಲಿ 1ನೇ ಆರೋಪಿಯ ಸಹಿ ಇರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒಟ್ಟಾರೆಯಾಗಿ **ನಿಪಿ-161** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-161(ಎ) ಎಂದು** ಗುರುತಿಸಲಾಯಿತು.

95. ದಿನಾಂಕ 17.03.2018 ರಂದು ಎಲ್.ಐ.ಸಿ ಬಂಟ್ವಾಳ ರವರಿಂದ ವರದಿ ಬಂದಿದ್ದು, ಅದರಲ್ಲಿ 1ನೇ ಆರೋಪಿಯ ಪಾಲಿಸಿಯಲ್ಲಿ ಹಿಂಪಡೆದ ರೂ.41,135 ಮತ್ತು 2ನೇ ಆರೋಪಿ ಹಿಂಪಡೆದ ಮೊತ್ತವನ್ನು ಕಳೆದು, ಬಾಕಿ ಉಳಿದ ರೂ.842 ಗಳನ್ನು ಅವರ ಆದಾಯಕ್ಕೆ ಪರಿಗಣಿಸಲಾಯಿತು. ಅದೇ ರೀತಿ 2ನೇ ಆರೋಪಿಯ ಪಾಲಿಸಿಯಲ್ಲಿ ಬಾಕಿ ಉಳಿದ ಮೊತ್ತ ರೂ.4,845 ಇದ್ದು ಅದನ್ನು ಅವರ ಆದಾಯಕ್ಕೆ ಪರಿಗಣಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು **ನಿಪಿ-162** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-162(ಎ) ಎಂದು** ಗುರುತಿಸಲಾಯಿತು.

96. ಅದೇ ದಿನ ವಿಜಯಾ ಬ್ಯಾಂಕ್ ಬೆಳ್ತಂಗಡಿ ರವರು ನೀಡಿದ 2ನೇ ಆರೋಪಿಯ ಮತ್ತು ಅವರ ಮಗಳಾದ ಕುಮಾರಿ ಚೈತ್ರಾ ರವರ ಕೈ.ವೈ.ಸಿ ದಾಖಲೆಗಳನ್ನು ಪಡೆದಿರುತ್ತೇನೆ. ಅದೇ ದಿನ ಸಿಂಡಿಕೇಟ್ ಬ್ಯಾಂಕ್ ಗುರುವಾಯನಕೆರೆರವರು ನೀಡಿದ 1ನೇ ಆರೋಪಿಯ ಕೈ.ವೈ.ಸಿ ದಾಖಲೆಗಳನ್ನು ಪಡೆದಿರುತ್ತೇನೆ. ಅದೇ ದಿನ ವಿಜಯ ಕ್ರೆಡಿಟ್ ಕಾಪರೇಟಿವ್ ಸೊಸೈಟಿ

ಗುರುವಾಯನಕೆರೆರವರು ನೀಡಿದ 2ನೇ ಆರೋಪಿಯ ಮತ್ತು ಅವರ ಮಗಳಾದ ಕುಮಾರಿ ಚೈತ್ರಾ ರವರ ಕೈ.ವೈ.ಸಿ ದಾಖಲೆಗಳನ್ನು ಪಡೆದಿರುತ್ತೇನೆ.

97. ದಿನಾಂಕ 21.03.2018 ರಂದು ಪೋಸ್ಟ್ ಆಫೀಸ್ ಪುತ್ತೂರು ರವರಿಂದ ವರದಿ ಬಂದಿದ್ದು, ಅದರಲ್ಲಿ 2ನೇ ಆರೋಪಿಯ ಉಳಿತಾಯ ಖಾತೆಯಲ್ಲಿದ್ದ ರೂ.821 ಮತ್ತು ಪಿ.ಪಿ.ಎಫ್ ಖಾತೆಯಲ್ಲಿದ್ದ ರೂ.32,489 ಗಳನ್ನು ಅವರ ಆಸ್ತಿಗೆ ಪರಿಗಣಿಸಲಾಯಿತು. ಅದೇ ರೀತಿ 1ನೇ ಆರೋಪಿಯ ಪಿ.ಪಿ.ಎಫ್ ಖಾತೆಯಲ್ಲಿದ್ದ ರೂ.1,875 ಗಳನ್ನು ಅವರ ಆಸ್ತಿಗೆ ಪರಿಗಣಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-9(ಎ) ಎಂದು** ಗುರುತಿಸಲಾಯಿತು.

98. ದಿನಾಂಕ 22.03.2018 ರಂದು 2ನೇ ಆರೋಪಿಯು ಪಾಲಿಸಿ ಸರೆಂಡರ್ ಮಾಡಿ ಪಡೆದ ಹಣದಲ್ಲಿ ಅದ ನಷ್ಟ ರೂ.5,437 ಅವರ ವೆಚ್ಚಕ್ಕೆ ಪರಿಗಣಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ಈಗಾಗಲೇ ನಿಪಿ-117 ಮತ್ತು 118 ಎಂದು ಗುರುತಿಸಲಾಗಿರುತ್ತದೆ.

99. ಅದೇ ದಿನ 2ನೇ ಆರೋಪಿಗೆ ರೂ.1,50,000 ಸಾಲ ಕೊಟ್ಟಿದ್ದೇನೆ ಎಂದು ಅಫಿದಾವಿತ್ ಸಲ್ಲಿಸಿದ ಕೇಶವ ಹೆಚ್.ಬಿ ರವರು ಬಿ.ಪಿ.ಎಲ್ ಕಾರ್ಡ್ ಪಡೆದ ಬಗ್ಗೆ ತಹಶೀಲ್ದಾರ್ ಸುಳ್ಯರವರು ಸಲ್ಲಿಸಿದ ದಾಖಲಾತಿಗಳನ್ನು ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು **ನಿಪಿ-163** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-163(ಎ) ಎಂದು** ಗುರುತಿಸಲಾಯಿತು.

100. ದಿನಾಂಕ 28.03.2017 ರಂದು ಎಲ್.ಐ.ಸಿ ಬಂಟ್ವಾಳರವರು 2ನೇ ಆರೋಪಿಯ ಪಾಲಿಸಿಗೆ ರೂ.40,000 ಪ್ರೀಮಿಯಂ ಕೊಟ್ಟ ಬಗ್ಗೆ ವರದಿ ನೀಡಿದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ಈಗಾಗಲೇ ನಿಪಿ-115 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-115(ಬಿ) ಎಂದು** ಗುರುತಿಸಲಾಯಿತು.

101. ದಿನಾಂಕ 11.04.2018 ರಂದು ಸಂತ ಮೇರಿ ಹಿರಿಯ ಪ್ರಾಥಮಿಕ ಶಾಲೆ ಲಾಯಿಲಾ ರವರು ಆರೋಪಿತರ ಮಗನಾದ ಜ್ಞಾನೇಶ್ ನ ಅಡ್ಮಿಷನ್ ದಾಖಲಾತಿ ನೀಡಿದ್ದು, ಅದರಲ್ಲಿ ಪೋಷಕರ ಆದಾಯ ರೂ.75,000 ಎಂದು ಇದ್ದು, ಅದರಲ್ಲಿ 2ನೇ ಆರೋಪಿಯ ಸಹಿ ಇರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು **ನಿಪಿ-164** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-164(ಎ) ಎಂದು** ಗುರುತಿಸಲಾಯಿತು.

102. ಅದೇ ದಿನ ಚಾಸಾ-54 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಹೇಳಿಕೆಯನ್ನು **ನಿಪಿ-165** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-165(ಎ) ಎಂದು** ಗುರುತಿಸಲಾಯಿತು.

103. ದಿನಾಂಕ 12.04.2018 ರಂದು ಉಪ ಆಯುಕ್ತರು ಅಬಕಾರಿ ಇಲಾಖೆರವರಿಂದ ಶ್ರೀ ಚನಿಯಪ್ಪ ನಾಯಕ್ ರವರ ಆಸ್ತಿ ಮತ್ತು ಋಣತಕ್ಕೆ ದಾಖಲೆಗಳು ಸ್ವೀಕೃತವಾಗಿರುತ್ತದೆ. ಸದರಿ ದಾಖಲಾತಿಗಳ ಪರಿಶೀಲನೆ ಮಾಡಿದಾಗ 1ನೇ ಆರೋಪಿತರು ಪಿತ್ರಾರ್ಜಿತ ಆಸ್ತಿಯ ಎಲ್ಲಾ ಆದಾಯ ತನಗೆ ಬರುತ್ತಿದೆ ಎಂದು

ಸಲ್ಲಿಸಿದ ಶೆಡ್ಯೂಲ್ ಮಾಹಿತಿ ಸರಿಯಲ್ಲ ಎಂದು ಕಂಡು ಬರುತ್ತಿದ್ದು ಚನಿಯಪ್ಪ ರವರು ಅದೇ ಆಸ್ತಿಯಿಂದ ತನಗೂ ಆದಾಯ ಬರುತ್ತಿದೆ ಎಂದು ಸದರಿ ದಾಖಲಾತಿಯಲ್ಲಿ ವಿವರಿಸಿರುವುದು ಕಂಡುಬಂದಿರುತ್ತದೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು **ನಿಪಿ-166** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-166(ಎ) ಎಂದು** ಗುರುತಿಸಲಾಯಿತು.

104. ದಿನಾಂಕ 17.04.2018 ರಂದು ತ್ರಿಭುವನ ಮೋಟಾರ್ಸ್ ರವರಿಂದ ಹೀರೋ ಹೋಂಡಾ ಸ್ಲೈಂಡರ್ ನಂಬ್ರ ಕೆಎ-21-ಹೆಚ್-0858 , ರೂ.40,625 ಎಂದು ವರದಿ ನೀಡಿರುತ್ತಾರೆ. ಅದನ್ನು 1ನೇ ಆರೋಪಿಯು ತಮ್ಮ ಶೆಡ್ಯೂಲ್ 14 ರಲ್ಲಿ ರೂ.18,000 ಗಳಿಗೆ ಮಾರಿಕೊಂಡಿದ್ದೇನೆ ಎಂದು ನಮೂದಿಸಿದ್ದು, ಆದ ನಷ್ಟ ರೂ.22,625 ನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ಈಗಾಗಲೇ ನಿಪಿ-30 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-30(ಎ) ಎಂದು** ಗುರುತಿಸಲಾಯಿತು.

105. ದಿನಾಂಕ 21.04.2018 ರಂದು ತಹಶೀಲ್ದಾರ್ ಪುತ್ತೂರು ರವರು ಬಲ್ನಾಡು ಗ್ರಾಮದ ಸರ್ವೆ ನಂಬ್ರ 342 ರಲ್ಲಿ 1ನೇ ಆರೋಪಿಯ ತಾಯಿಯಾದ ಶ್ರೀಮತಿ ಕಮಲಾರವರು ಹೊಂದಿದ್ದ ಜಮೀನಿನ ವಿವರ ನೀಡಿದ್ದು, ಆ ವರದಿಯಲ್ಲಿ 2013-14 ರಲ್ಲಿ ಅವರು ರೂ.4,800 ಗಳು ಕೊಳೆ ರೋಗದ ಪರಿಹಾರ ಪಡೆದಿದ್ದು, 2013-14 ರಲ್ಲಿ ಪ್ರಾಕೃತಿಕ ವಿಕೋಪದಿಂದ ಬೆಳೆ ನಾಶವಾದ ಬಗ್ಗೆ ನಮೂದಿಸಿರುತ್ತಾರೆ. 2001 ರಿಂದ 2017 ರವರೆಗೆ ಶ್ರೀಮತಿ ಕಮಲಾರವರೇ ಕಂದಾಯ ರಶೀದಿ ಪಾವತಿ ಮಾಡಿರುವುದು ಕಂಡು ಬಂದಿರುತ್ತದೆ. ಇದರಿಂದ

ಶ್ರೀಮತಿ ಕಮಲಾರವರೇ ಆ ಎಲ್ಲಾ ಜಮೀನುಗಳ ಆದಾಯವನ್ನು ಪಡೆಯುತ್ತಿರುವುದಾಗಿ ಕಂಡು ಬಂದಿರುತ್ತದೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ಈಗಾಗಲೇ ನಿಪಿ-110 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-110(ಎ) ಎಂದು** ಗುರುತಿಸಲಾಯಿತು.

106. ದಿನಾಂಕ 23.04.2018 ರಂದು ತಹಶೀಲ್ದಾರ್ ಬೆಳ್ತಂಗಡಿ ರವರು ಕೋಚು ನಾಯಕ್ ಮತ್ತು ಅರುಣ್ ಕುಮಾರ್ ರವರ ಪಡಿತರ ಚೀಟಿಯ ಬಗ್ಗೆ ವರದಿ ನೀಡಿರುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು **ನಿಪಿ-167** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-167(ಎ) ಎಂದು** ಗುರುತಿಸಲಾಯಿತು.

107. ದಿನಾಂಕ 08.05.2018 ರಂದು ಡಾಃ ಅರುಣ್ ಕುಮಾರ್ ಕೆ.ಎನ್ ವೈದ್ಯಾಧಿಕಾರಿಗಳು ಪಡಂಗಡಿ ರವರು 2ನೇ ಆರೋಪಿಯ 2012 ರ ಚರಾಸ್ತಿ ಚಿರಾಸ್ಥಿಯ ಪಟ್ಟಿಯ ಬಗ್ಗೆ ತಮ್ಮ ಸಮಜಾಯಿಷಿಯನ್ನು ನೀಡಿರುತ್ತಾರೆ. ಅದೇ ದಿನ ಸಿಂಡಿಕೇಟ್ ಬ್ಯಾಂಕ್ ವಿಟ್ಲರವರು ನೀಡಿದ 2ನೇ ಆರೋಪಿಯ ಕೈ.ವೈ.ಸಿ ದಾಖಲೆಗಳನ್ನು ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿರುತ್ತದೆ.

108. ದಿನಾಂಕ 01.06.2018 ರಂದು ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕರು, ಶ್ರೀಮತಿ ಕಮಲಾರವರ ಹೆಸರಿನಲ್ಲಿದ್ದ ಬಲ್ನಾಡು ಗ್ರಾಮದ ಸರ್ವೇ ನಂಬ್ರ 342 ರಲ್ಲಿ 2000 ದಿಂದ 2016 ರವರೆಗಿನ ಆದಾಯ ಮತ್ತು ವೆಚ್ಚದ ವರದಿಯನ್ನು ನೀಡಿರುತ್ತಾರೆ. ಸದರಿ ಜಮೀನನ್ನು ಅವರ ದೊಡ್ಡ ಮಗ ಬಾಬು

ನಾಯಕ್ ರವರು ನೋಡಿಕೊಳ್ಳುತ್ತಿದ್ದರು. 2014 ರಲ್ಲಿ ಬಾಬು ನಾಯಕ್ ರವರು ಮೃತಪಟ್ಟ ನಂತರ, 1ನೇ ಆರೋಪಿ ಅದನ್ನು ನೋಡಿಕೊಳ್ಳುತ್ತಿದ್ದು, ಅದರಲ್ಲೇ ಶ್ರೀಮತಿ ಕಮಲಾರವರೇ ವೈದ್ಯಕೀಯ ವೆಚ್ಚ ಮತ್ತು ಕೌಟುಂಬಿಕ ವೆಚ್ಚ ನೋಡಿಕೊಳ್ಳುತ್ತಿದ್ದರು ಎಂದು ಶ್ರೀಮತಿ ಕಮಲಾ ಮತ್ತು ಕುಸುಮಾರವರ ಹೇಳಿಕೆಗಳಲ್ಲಿ ಕಂಡು ಬಂದಿರುತ್ತದೆ. ಇದರಿಂದ 2015 ಮತ್ತು 2016 ರ ತೋಟಗಾರಿಕಾ ಬೆಳೆ ಆದಾಯದ ರೂ.2,74,596.88 ರಲ್ಲಿ ಅರ್ಧದಷ್ಟು ಶ್ರೀಮತಿ ಕಮಲಾರವರಿಗೆ ಎಂದು ಪರಿಗಣಿಸಲಾಯಿತು ಮತ್ತು ಉಳಿದ ಅರ್ಧ ಆದಾಯವಾದ ರೂ.1,37,298.44 ನ್ನು 1ನೇ ಆರೋಪಿಯ ಆದಾಯಕ್ಕೆ ಪರಿಗಣಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ದಾಖಲೆಯನ್ನು ಈಗಾಗಲೇ ನಿಪಿ-119 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-119(ಬಿ) ಎಂದು** ಗುರುತಿಸಲಾಯಿತು.

109. ದಿನಾಂಕ 02.06.2018ರಂದು 2ನೇ ಆರೋಪಿಯ ಹೆಸರಿನಲ್ಲಿದ್ದ ಮನೆಯ ಮೌಲ್ಯಮಾಪನವನ್ನು ಶ್ರೀಕಿರಣ್ ಮಸೂತಿ, ಇ.ಇ. ಎ.ಸಿ.ಬಿ ಬೆಂಗಳೂರುರವರು ಸಲ್ಲಿಸಿದ್ದು, ಅದರಲ್ಲಿ ಮೌಲ್ಯವನ್ನು ರೂ.53 ಲಕ್ಷ ಎಂದು ತೋರಿಸಲಾಗಿರುತ್ತದೆ. ಅದನ್ನು ಅವರ ಆಸ್ತಿಗೆ ಪರಿಗಣಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು ಈಗಾಗಲೇ ನಿಪಿ-73 ರಿಂದ ನಿಪಿ-86 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-84(ಎ) ಎಂದು** ಗುರುತಿಸಲಾಯಿತು.

110. ದಿನಾಂಕ 07.07.2018 ರಂದು ಶ್ರೀ.ಬಾಬು ನಾಯಕ್ ರವರ ಮರಣ ಪ್ರಮಾಣ ಪತ್ರವನ್ನು ತಹಶೀಲ್ದಾರ್ ಪುತ್ತೂರು ರವರು ನೀಡಿರುತ್ತಾರೆ.

111. ದಿನಾಂಕ 28.07.2018 ರಂದು ಆರೋಪಿತರ ಮನೆಯ ಗೃಹ ಪ್ರವೇಶದ ಕ್ಯಾಟರಿಂಗ್ ಮಾಡಿದ ವೈಷ್ಣವಿ ಕ್ಯಾಟರಿಂಗ್ ಮಾಲೀಕರಾದ ಶ್ರೀ ಯೋಗಿಶ್ ಪೈ ರವರ ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ. 2016 ರಲ್ಲಿ ಗೃಹಪ್ರವೇಶ ಆಗಿದ್ದು ಕ್ಯಾಟರಿಂಗ್ ಖರ್ಚು ರೂ.72,000 ಆಗಿದ್ದು ಅವರ ವೆಚ್ಚಕ್ಕೆ ಪರಿಗಣಿಸಲಾಯಿತು. ಅದೇ ದಿನ ಶಾಮಿಯಾನ ಮತ್ತು ಇತರೇ ವ್ಯವಸ್ಥೆ ಮಾಡಿದ ದೀಪ ಅರೇಂಜರ್ಸ್ ನ ಮಾಲೀಕರಾದ ಶ್ರೀ ಪ್ರಭಾಕರ ಶೆಟ್ಟಿ ರವರ ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತೇನೆ. ಅದರ ವೆಚ್ಚ ರೂ. 40,000 ಆಗಿದ್ದು ಅದನ್ನು ಅವರ ವೆಚ್ಚಕ್ಕೆ ಪರಿಗಣಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು ಈಗಾಗಲೇ ನಿಪಿ-100 ಮತ್ತು 101 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-100(ಬಿ) ಮತ್ತು 101(ಬಿ) ಎಂದು** ಗುರುತಿಸಲಾಯಿತು.

112. ದಿನಾಂಕ 03.08.2018 ರಂದು ತಹಶೀಲ್ದಾರ್ ಪುತ್ತೂರುರವರು 1ನೇ ಆರೋಪಿಯ ತಾಯಿಯ ಸಂತತಿ ನಕ್ಷೆಯನ್ನು ನೀಡಿರುತ್ತಾರೆ. ಸಾಕ್ಷಿ ಗುರುತಿಸಿದ ದಿನಾಂಕ 27.07.2018 ರ ಪತ್ರ ಮತ್ತು ಸಂತತಿ ನಕ್ಷೆಯನ್ನು **ನಿಪಿ-168** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-168(ಎ) ಎಂದು** ಗುರುತಿಸಲಾಯಿತು.

113. ದಿನಾಂಕ 06.08.2018 ರಂದು ಆರೋಪಿಗಳ ಕೌಟುಂಬಿಕ ವೆಚ್ಚವನ್ನು ಉಪ ನಿರ್ದೇಶಕರು (ಸಾಂಖಿಕ) ಎ.ಸಿ.ಬಿ ಬೆಂಗಳೂರುರವರು ನೀಡಿದ್ದು,ಅದರಲ್ಲಿ ನಮೂದಿಸಿದ ರೂ.12,54,005 ಗಳನ್ನು ಅವರ ವೆಚ್ಚಕ್ಕೆ

ಪರಿಗಣಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು ಈಗಾಗಲೇ ನಿಪಿ-108 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-108(ಬಿ) ಎಂದು** ಗುರುತಿಸಲಾಯಿತು.

114. ದಿನಾಂಕ 14.08.2018 ರಂದು ಶ್ರೀಮತಿ ಪೊನ್ನಕ್ಕ ಮತ್ತು ಶ್ರೀ ವಸಂತ ಕುಮಾರ್ ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ಹೇಳಿಕೆಗಳನ್ನು **ನಿಪಿ-169 ಮತ್ತು 170** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-169(ಎ) ಮತ್ತು ನಿಪಿ-170(ಎ) ಎಂದು** ಗುರುತಿಸಲಾಯಿತು.

115. ದಿನಾಂಕ 16.08.2018 ರಂದು ಬಲ್ನಾಡು ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ ಬೆಳಿಯೂರುಕಟ್ಟೆ ರವರು ಬಾಬು ನಾಯಕ್ ರವರ ಸಹಿ ಇರುವ ದಾಖಲಾತಿಗಳನ್ನುಕಳುಹಿಸಿಕೊಟ್ಟಿರುತ್ತಾರೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು ಈಗಾಗಲೇ ನಿಪಿ-102 ರಿಂದ 106 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-106(ಬಿ) ಎಂದು** ಗುರುತಿಸಲಾಯಿತು.

116. ಅದೇ ದಿನ 1ನೇ ಆರೋಪಿಯು ತಮ್ಮ ಶೆಡ್ಯೂಲ್ -4 ರ ಪುಟ ಸಂಖ್ಯೆ 180 ರಲ್ಲಿ ಒಂದು ಪತ್ರವನ್ನು ಲಗತ್ತಿಸಿದ್ದು ಅದರಲ್ಲಿ ಆದಾಯ ಪಡೆದುಕೊಂಡ ಬಗ್ಗೆ , ಅದರ ಮೂಲ ಪತ್ರವನ್ನು ಹಾಜರುಪಡಿಸುವಂತೆ ನೋಟಿಸು ನೀಡಿರುತ್ತೇನೆ.

117. ದಿನಾಂಕ 18.08.2018 ರಂದು 2ನೇ ಆರೋಪಿಗೆ ಉಡುಗೊರೆಗಳನ್ನು ಕೊಟ್ಟಿದ್ದೆ ಎಂದು ದಾಖಲಾತಿ ನೀಡಿದ್ದು, ಜನಾರ್ಧನ್ ಹೆಚ್.ಬಿ ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 20.08.2018 ರಂದು 2ನೇ ಆರೋಪಿಗೆ

ಉಡುಗೊರೆಗಳನ್ನು ಕೊಟ್ಟಿದ್ದೆ ಎಂದು ದಾಖಲಾತಿ ನೀಡಿದ್ದು, ಶ್ರೀಮತಿ ಕುಮುದಾ ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಉಪನೋಂದಣಾಧಿಕಾರಿ ಬೆಳ್ತಂಗಡಿ ರವರು 2ನೇ ಆರೋಪಿ ಕುವೆಟ್ಟು ಗ್ರಾಮದ ಸರ್ವೇ ನಂಬ್ರ 123-3ಬಿ ಪೈಕಿ 4 ಸೆಂಟ್ಸ್ ಜಮೀನನ್ನು ರೂ.4,000 ಗಳಿಗೆ ವಿಜಯ ಗೌಡರವರಿಗೆ ಮಾರಾಟ ಮಾರಿದ ಹಣವನ್ನು ಅವರ ಆದಾಯಕ್ಕೆ ಪರಿಗಣಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿರುತ್ತದೆ.

118. ದಿನಾಂಕ 25.08.2018 ರಂದು 1ನೇ ಆರೋಪಿರವರು ನಾನು ನೀಡಿದ ನೋಟಿಸಿಗೆ ಪ್ರತಿಯಾದ ತನ್ನ ಹತ್ತಿರ ಮೂಾಲ ದಾಖಲೆ ಇಲ್ಲ ಎಂದು ಬರೆದ ಪತ್ರ ಅಂಚೆ ಮೂಾಲಕ ಸ್ವೀಕೃತವಾಗಿರುತ್ತದೆ. ಶೆಡ್ಯೂಲ್ ನಲ್ಲಿ ಸಲ್ಲಿಸಿದ ಪತ್ರದಲ್ಲಿ ಇರುವ ಬಾಬುನಾಯಕ್ ರವರ ಸಹಿಗೂ , ಬಲ್ನಾಡು ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ ಬೆಳಿಯೂರು ಕಟ್ಟೆ ರವರು ನೀಡಿದ ದಾಖಲೆಯಲ್ಲಿದ್ದ ಬಾಬು ನಾಯಕ್ ರವರ ಮೂಲ ಸಹಿಗೂ ಯಾವುದೇ ಹೊಂದಾಣಿಕೆಯಾಗದೇ ಇರುವುದು ಕಂಡು ಬಂದಿರುತ್ತದೆ.

119. ದಿನಾಂಕ 07.09.2018 ರಂದು 1ನೇ ಆರೋಪಿರವರು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಹರಿಹರ ಮತ್ತು ಮಂಗಳೂರಿನಲ್ಲಿ 1986 ರಿಂದ 88 ರವರೆಗೆ ಬೆರಳಚ್ಚುಗಾರನಾಗಿ ಕರ್ತವ್ಯ ನಿರ್ವಹಿಸಿದ ಬಗ್ಗೆ ಸಹಾಯಕ ಪ್ರಧಾನ ವ್ಯವಸ್ಥಾಪಕರು ರೂ.27,744.45 ವೇತನ ನೀಡಿದ ಬಗ್ಗೆ ವರದಿ ನೀಡಿದ್ದು, ಅದನ್ನು ಅವರ ಆದಾಯಕ್ಕೆ ಪರಿಗಣಿಸಲಾಯಿತು. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು **ನಿಪಿ-171** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-171(ಎ)**

**ಎಂದು** ಗುರುತಿಸಲಾಯಿತು.

120. ದಿನಾಂಕ 10.09.2018 ರಂದು 1 ಮತ್ತು 2ನೇ ಆರೋಪಿತರು ಠಾಣೆಗೆ ಬಂದಿದ್ದು, ಅವರಿಗೆ ಪ್ರಶ್ನಾವಳಿಗಳನ್ನು ನೀಡಿ ಅವರು ನೀಡಿದ ಉತ್ತರವನ್ನು ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು **ನಿಪಿ-172 ಮತ್ತು 173** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-172(ಎ) ಮತ್ತು ನಿಪಿ-173(ಎ) ಎಂದು** ಗುರುತಿಸಲಾಯಿತು.

121. ದಿನಾಂಕ 14.09.2018 ರಂದು ಅಂಚೆ ಕಚೇರಿ ಪುತ್ತೂರುರವರಿಂದ ಒಂದು ಪತ್ರ ಬಂದಿದ್ದು, ದಾಖಲಾತಿಗಳು ಹೊಸದಾಗಿ ಗಣಕೀಕರಿಸಿದ್ದರಿಂದ ಮಾಹಿತಿ ಲಭ್ಯವಿಲ್ಲವೆಂದು, ಆದ್ದರಿಂದ 2ನೇ ಆರೋಪಿಯು ತಮ್ಮ ಶೆಡ್ಯೂಲ್ ನಲ್ಲಿ ನಮೂದಿಸಿದ ಮೆಚ್ಯುರಿಟಿ ಮೊತ್ತ ರೂ.30,000 ವನ್ನು ಅವರ ಆದಾಯಕ್ಕೆ ಪರಿಗಣಿಸಿರುತ್ತೇನೆ. ಸಾಕ್ಷಿ ಗುರುತಿಸಿದ ಸದರಿ ದಾಖಲೆಗಳನ್ನು **ನಿಪಿ-174** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-174(ಎ) ಎಂದು** ಗುರುತಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.

**ದಿನಾಂಕಃ 28.11.2025**ರಂದು ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರಿಂದಃ</u>**

122. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 1ನೇ ಆರೋಪಿಯ ಆಸ್ತಿ ಮತ್ತು ಋಣತಖ್ತೆಯನ್ನು (ಎ.ಪಿ.ಆರ್) ಜಿಲ್ಲಾಧಿಕಾರಿ,ದ.ಕ ರವರಿಂದ ಪಡೆದಿರುತ್ತೇನೆ. ಸದರಿ ದಾಖಲೆಗಳನ್ನು **ನಿಪಿ-175** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-175(ಎ)** ಎಂದು ಗುರುತಿಸಲಾಯಿತು. 1ನೇ ಆರೋಪಿಗೆ ಸಂಬಂಧಪಟ್ಟ ವಾಹನ ಕೆಎ-21-ಎಸ್-0888 ನ ಪಾಲಿಸಿ ಡಿಡ್ಯೈಲ್ಸ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ-176** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-176(ಎ)** ಎಂದು ಗುರುತಿಸಲಾಯಿತು. 2ನೇ ಆರೋಪಿಯ ಸಂಬಳದ ಮಾಹಿತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-177** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-177ಎ)** ಎಂದು ಗುರುತಿಸಲಾಯಿತು.

123. ಸದರಿ ಪ್ರಕರಣದಲ್ಲಿ 1 ಮತ್ತು 2ನೇ ಆರೋಪಿತರು ತಮ್ಮ ಸಮಜಾಯಿಶಿ ರೂಪದಲ್ಲಿ ಶೆಡ್ಯೂಲ್ ಗಳನ್ನು ನೀಡಿರುತ್ತಾರೆ. ಅವುಗಳನ್ನು ತನಿಖೆಯಲ್ಲಿ ಪಡೆದುಕೊಂಡ ದಾಖಲಾತಿಗಳೊಂದಿಗೆ ಪರಿಶೀಲಿಸಿ ನೋಡಲಾಯಿತು. ಶೆಡ್ಯೂಲ್ -1 ರಲ್ಲಿ 1 ಮತ್ತು 2ನೇ ಆರೋಪಿತರು ಒದಗಿಸಿದ ಸಂಬಳದ ಆದಾಯಕ್ಕೂ ಮತ್ತು ನಾವು ಸಂಬಳದ ಬಟವಾಡೆ ಅಧಿಕಾರಿಗಳಿಂದ ಪಡೆದ ಸಂಬಳ ಮಾಹಿತಿಗಳಿಗೂ ಕ್ರಮವಾಗಿ ರೂ.1,16,036 ಮತ್ತು ರೂ.37,242 ವ್ಯತ್ಯಾಸವಿದ್ದು ಆದರೆ ಅಧಿಕಾರಿಗಳು ದಾಖಲೆಗಳಲ್ಲಿ ನೀಡಿದ ಮಾಹಿತಿಯನ್ನು ತನಿಖೆಯಲ್ಲಿ ಪರಿಗಣಿಸಲಾಗಿರುತ್ತದೆ.

124. ಶೆಡ್ಯೂಲ್ -2 ರಲ್ಲಿ ಅವರು ತಮ್ಮ ಬಾಡಿಗೆ ಆದಾಯದಲ್ಲಿ ರೂ.57,45,000 ಎಂದು ನಮೂದಿಸಿರುತ್ತಾರೆ. ನಾವು ಪಡೆದುಕೊಂಡ ದಾಖಲಾತಿಗಳು ಮತ್ತು ಅವರು ಸಲ್ಲಿಸಿದ ದಾಖಲಾತಿಗಳನ್ನು ಪರಿಶೀಲಿಸಿದಾಗ ಮತ್ತು ಅವರು ಕೊಟ್ಟ ಒಟ್ಟು ಮೊತ್ತದಲ್ಲಿ ತಪ್ಪಿದ್ದನ್ನು ಕಂಡು ಹಿಡಿದು ಪರಿಗಣಿಸಿ ಅವರ ಒಟ್ಟು ಬಾಡಿಗೆ ಆದಾಯ ಮತ್ತು ಮುಂಗಡ ಎರಡೂ ಸೇರಿ ರೂ.7,09,500 ಎಂದು ಪರಿಗಣಿಸಿರುತ್ತೇವೆ.

125. ಶೆಡ್ಯೂಲ್ -3 ರಲ್ಲಿ 1 ಮತ್ತು 2ನೇ ಆರೋಪಿತರು ಕೃಷಿ ಆದಾಯದಲ್ಲಿ ರೂ.45,81,119 ಎಂದು ನಮೂದಿಸಿರುತ್ತಾರೆ. ಆಪಾದಿತರು ಒಬ್ಬ ನಿವೃತ್ತ ಕೃಷಿ ಅಧಿಕಾರಿಯಿಂದ ತಮಗೆ ಬೇಕಾದ ಹಾಗೆ ತಯಾರಿಸಿದ್ದು ಕಂಡು ಬಂದಿರುತ್ತದೆ. ಹೇಗೆಂದರೆ 2013-14 ರಲ್ಲಿ ಪ್ರಕೃತಿ ವಿಕೋಪದಿಂದ ಬೆಳೆ ನಾಶವಾಗಿದ್ದು, ಈ ಬಗ್ಗೆ ಸದರಿ ತೋಟದ ಮಾಲೀಕರಾದ ಆರೋಪಿ-1 ರವರ ತಾಯಿ ಶ್ರೀಮತಿ ಕಮಲರವರು ತಹಶೀಲ್ದಾರ್ ರವರಿಗೆ ಅರ್ಜಿ ನೀಡಿ ರೂ.4,800 ಗಳನ್ನು ಮಾತ್ರ ಪರಿಹಾರವಾಗಿ ಪಡೆದಿರುತ್ತಾರೆ. ಆದರೆ ಆ ವರ್ಷದ ಆದಾಯವನ್ನು ಪರಿಶೀಲಿಸಿದಾಗ ತಮಗೆ ಬೇಕಾದ ಹಾಗೆ ದಾಖಲೆ ತಯಾರಿಸಿಕೊಂಡಿರುವುದು ಕಂಡು ಬಂದಿರುತ್ತದೆ. 1ನೇ ಅ ಆರೋಪಿ 2000-01 ರಂದು ಆಸ್ತಿ ಮತ್ತು ಋಣತಖ್ತೆಯಲ್ಲಿ ಸದರಿ ತೋಟಗಳಿಂದ ಕೇವಲ ರೂ.1,000 ಆದಾಯ ಎಂದು ನಮೂದಿಸಿರುತ್ತಾರೆ. ಆಪಾದಿತರ ಮನೆಯ ಶೋಧನೆ ಕಾಲಕ್ಕೆ ಈ ತೋಟಗಳಿಂದ ಬರುವ ಯಾವುದೆ ಉತ್ಪನ್ನಗಳು ಕಂಡು ಬಂದಿರುವುದಿಲ್ಲ ಮತ್ತು ತೋಟಕ್ಕೆ ಮಾಡಿದ ಖರ್ಚಿನ ದಾಖಲಾತಿಗಳಾಗಲೀ ಅಥವಾ ಉತ್ಪನದ ದಾಖಲಾತಿಗಳಾಗಲೀ ಔಷಧಿ ಮತ್ತು ಗೊಬ್ಬರದ ದಾಖಲಾತಿಗಳಾಗಲೀ ಯಾವುದು ದೊರಕಿರುವುದಿಲ್ಲ. ಆಪಾದಿತರು ತಮ್ಮ ಆಸ್ತಿ ಮತ್ತು ಋಣತಖ್ತೆಯಲ್ಲಿ ಪ್ರತಿ ವರ್ಷ ನಮೂದಿಸಿಕೊಂಡು ಹೋಗಿರುವುದಿಲ್ಲ. ಆಪಾದಿತರು ತಮ್ಮ

ಆದಾಯದಲ್ಲೂ ಸಹ ಯಾವುದೇ ಮಾಹಿತಿ ನೀಡಿರುವುದಿಲ್ಲ. 1ನೇ ಆರೋಪಿತರ ತಾಯಿ ಮತ್ತು ಸದರಿ ತೋಟದ ಮಾಲೀಕರಾದ ಶ್ರೀಮತಿ ಕಮಲ, ಅಣ್ಣನ ಪತ್ನಿಯವರಾದ ಶ್ರೀಮತಿ ಕುಸುಮ ಮತ್ತು ಸಹೋದರ ಚನಿಯಪ್ಪ ರವರ ಹೇಳಿಕಗಳಲ್ಲಿ 1ನೇ ಆರೋಪಿಯ ಅಣ್ಣ ಬಾಬು ನಾಯಕ್ 2014 ರವರೆಗೆ ಜೀವಂತ ಇರುವವರೆಗೂ ಸದರಿ ಉತ್ಪನ್ನಗಳನ್ನು ಅವರೇ ಪಡೆದುಕೊಂಡು ಆ ಮನೆಯ ಸಂಸಾರವನ್ನು ನೊಡಿಕೊಂಡು ಹೋಗಿರುವುದು ತನಿಖೆಯಲ್ಲಿ ಕಂಡು ಬಂದಿರುತ್ತದೆ.

126. 1ನೇ ಆರೋಪಿಯು ಸದರಿ ಶೆಡ್ಯೂಲ್ ನಲ್ಲಿ 1986 ರಿಂದ ಈ ತೋಟದ ಉತ್ಪನ್ನವನ್ನು ತಾನೇ ಪಡೆಯುತ್ತಿದ್ದೆ ಎಂಬುದನ್ನು ಒಪ್ಪಲು ಬರುವುದಿಲ್ಲ. ಅನುಬಂದ 4 ರಲ್ಲಿ ಅವರು ಕುಟುಂಬದ ತೋಟವನ್ನು ತನಗೆ ಒಪ್ಪಿಸಿರುವ ಹಾಗೆ ಒಂದು ಒಪ್ಪಿಗೆ ಪತ್ರವನ್ನು ತಯಾರಿಸಿ ಸಲ್ಲಿಸಿರುತ್ತಾರೆ. ನೊಟೀಸು ನೀಡಿದ ನಂತರವೂ ಸಹ ಮೂಲ ಒಪ್ಪಿಗೆ ಪತ್ರವನ್ನು 1ನೇ ಆರೋಪಿಯು ತನಿಖೆಗೆ ಒದಗಿಸಿರುವುದಿಲ್ಲ. ಆದ್ದರಿಂದ 1ನೇ ಆರೋಪಿ ರವರ ಅಣ್ಣ ಮತ್ತು ಈ ಒಪ್ಪಿಗೆ ಪತ್ರಕ್ಕೆ ಸಹಿ ಮಾಡಿದ ಬಾಬು ನಾಯಕ್ ರವರ ಮೂಲ ಸಹಿ ಇರುವ ದಾಖಲಾತಿಗಳನು ತೆಗೆದುಕೊಂಡು ಪರಿಶೀಲಿಸಿದಾಗ, ಬರಿಗಣ್ಣಿನಿಂದಲೇ ಒಪ್ಪಿಗೆ ಪತ್ರದಲ್ಲಿರುವ ಸಹಿ ಮತ್ತು ಬಾಬುನಾಯಕ್ ರವರ ಸಹಿಗೂ ಯಾವುದೇ ಹೊಂದಾಣಿಕೆಯಾಗಿರುವುದಿಲ್ಲ. ಆಪಾದಿತರ ಮಕ್ಕಳ ಶಾಲಾ ವಿದ್ಯಾಭ್ಯಾಸದ ದಾಖಲಾತಿಗಳನ್ನು ಪಡೆದುಕೊಂಡು ಪರಿಶೀಲಿಸಿದಾಗ ಅಲ್ಲಿ ನಮೂದಿಸಿದ ಪೋಷಕರ ಆದಾಯ ಈ ತೋಟಗಾರಿಕೆ ಆದಾಯವನ್ನು ಬಿಟ್ಟು ಉಳಿದ ಆದಾಯವನ್ನು ತೋರಿಸಿರುವುದು ಕಂಡು ಬಂದಿರುತ್ತದೆ. ಆದ್ದರಿಂದ 1 ಮತ್ತು 2ನೇ

ಆರೋಪಿತರು ನೀಡಿದ ಕೃಷಿ ಆದಾಯವನ್ನು ಒಪ್ಪಿಕೊಂಡಿರುವುದಿಲ್ಲ. ನಾವು ತನಿಖೆಯಲ್ಲಿ ಅಧೀಕೃತ ತೋಟಗಾರಿಕಾ ಅಧಿಕಾರಿಯಿಂದ ಪಡೆದ ಮೌಲ್ಯವನ್ನೇ ತನಿಖೆಯಲ್ಲಿ ಪರಿಗಣಿಸಲಾಗಿದೆ.

127. ಶೆಡ್ಯೂಲ್ -4 ರಲ್ಲಿ ಅವರು ನಮೂದಿಸಿದ ಆದಾಯಗಳನ್ನು ಒಪ್ಪಿಕೊಂಡಿದ್ದು, ಸಂಬಳದ ಕಡಿತವನ್ನು ಮಾತ್ರ ನೀಡಲು ಬರದ ಕಾರಣ ಪರಿಗಣಿಸಿರುವುದಿಲ್ಲ. ಆಪಾದಿತರು, ಹೆಚ್ ಬಿ ಜನಾರ್ಧನ್ ಅಫಿದಾವಿತ್ ಸಲ್ಲಿಸಿದ್ದು ಆದರೆ ಅದರ ಬಗ್ಗೆ ಆಸ್ತಿ ಮತ್ತು ಋಣತಖ್ತೆಯಲ್ಲಿ ನಮೂದಿಸಿರದ ಕಾರಣ ಅದನ್ನು ಒಪ್ಪಿಕೊಂಡಿರುವುದಿಲ್ಲ. 2ನೇ ಆರೋಪಿತ ಮ್ಮ ಆಸ್ತಿ ಮತ್ತು ಋಣತಖ್ತೆಯಲ್ಲಿ 1993-94 ರಲ್ಲಿ 53 ಗ್ರಾಂ ಬಂಗಾರ ತಮ್ಮ ಮದುವೆ ಕಾಲದಲ್ಲಿ ಬಂದ ಉಡುಗೊರೆ ಎಂದು ನಮೂದಿಸಿದ್ದು, ಸದರಿ ಬಂಗಾರವನ್ನು ನಾನು ಉಡುಗೊರೆ ಎಂದು ಪರಿಗಣಿಸಿ ಅಪಾದಿತರ ಆಸ್ತಿಯಿಂದ ಕೈಬಿಟ್ಟಿರುತ್ತೇನೆ.

128. ಶೆಡ್ಯೂಲ್-5 ರಲ್ಲಿ 1 ಮತ್ತು 2ನೇ ಆರೋಪಿತರು ಬ್ಯಾಂಕ್ ಗಳಿಂದ ಪಡೆದ ಸಾಲಗಳನ್ನು ಆದಾಯವಾಗಿತೊರಿಸಿರುತ್ತಾರೆ ಆದರೆ ಈ ಎಲ್ಲಾ ಸಾಲಗಳು ಚೆಕ್ ಅವಧಿಯಲ್ಲೇ ತೀರುವಳಿಗೊಂಡಿದ್ದು ಅದನ್ನು ಆದಾಯಕ್ಕೆ ಪರಿಗಣಿಸಲು ಬರುವುದಿಲ್ಲ. ತುಂಬಿದ ಬಡ್ಡಿಯನ್ನು ಮಾತ್ರ ವೆಚ್ಚಕ್ಕೆ ಪರಿಗಣಿಸಲಾಗಿರುತ್ತದೆ.

129. ಶೆಡ್ಯೂಲ್-6 ರಲ್ಲಿ 2ನೇ ನೇ ಆರೋಪಿತೆ ಮೊಹಮ್ಮದ್ ಶರೀಫ್ ರವರಿಂದ ರೂ.4 ಲಕ್ಷ ಕೈಸಾಲ ಪಡೆದ ಬಗ್ಗೆ ಅಫಿದಾವಿತ್ ಸಲ್ಲಿಸಿದ್ದು ಅದು ಬ್ಯಾಂಕ್ ಮುಖಾಂತರ ವರ್ಗಾವಣೆಯಾಗಿರುವ ಬಗ್ಗೆ ತನಿಖೆಯಲ್ಲಿ ಕಂಡು ಬಂದಿದ್ದು

ಅದನ್ನು ಒಪ್ಪಿಕೊಂಡು ಆದಾಯಕ್ಕೆ ಪರಿಗಣಿಸಿರುತ್ತೇವೆ. ಉಳಿದ ಕೈಸಾಲಗಳು ನೀಡಿದವರಾದ ಸುಂದರ್ ಕೆ., ಕೇಶವ್ , ಕೋಚು ನಾಯಕ್ ರವರು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲಮತ್ತು ಅಫಿದಾವಿತ್ ಗಳನ್ನು ಚೆಕ್ ಅವಧಿಯ ನಂತರ ತಯಾರಿಸಿದ್ದು, ಅಫಿದಾವಿತ್ ಗಳಿಗೆ ಬಾಂಡ್ ಗಳನ್ನು 1 ಮತ್ತು 2ನೇ ಆರೋಪಿತರೇ ಖರೀದಿಸಿ ಅವರೇ ಟೈಪ್ ಮಾಡಿಸಿದ್ದು ಮತ್ತು ಕೇಶವ್ ಮತ್ತು ಕೋಚುನಾಯಕ್ ರವರು ಬಿ.ಪಿ.ಎಲ್ ಕಾರ್ಡ್ ನವರಾಗಿದ್ದು ಅವರಿಗೆ ಸಾಲ ಕೊಡುವಷ್ಟು ಆದಾಯ ಇಲ್ಲ ಎಂದು ತನಿಖೆಯಲ್ಲಿ ಸಾಬಿತಾಗಿದ್ದು ಆಸ್ತಿ ಮತ್ತು ಋಣ ತಖ್ತೆಯಲ್ಲಿ ಸಾಲ ಪಡೆದುಕೊಂಡ ಬಗ್ಗೆ ನಮೂದು ಇಲ್ಲದೇ ಇದ್ದು, ನಿಯಮ-21 ನಡತೆ ನಿಯಮದಂತೆ ಸರ್ಕಾರದ ಅನುಮತಿ ಪಡೆಯದೇ ಇದ್ದುದ್ದರಿಂದ, ಸದರಿ ಸಾಲದ ಆದಾಯವನ್ನು ತಿರಸ್ಕರಿಸಲಾಯಿತು.

130. ಶೆಡ್ಯೂಲ್-7ಎ , ಬಿ, 8ಎ, 8ಸಿ ಗಳನ್ನು ಒಪ್ಪಿಕೊಳ್ಳಲಾಗಿದೆ. ಶೆಡ್ಯೂಲ್-8ಬಿ ಚೆಕ್ ಅವಧಿಯ ಕೊನೆಯಲ್ಲಿ ಇರುವ ಬ್ಯಾಲೆಂಸನ್ನು ಅದಾಯ ಎಂದು ಒಪ್ಪಿಕೊಳ್ಳಲಾಗಿದೆ.

131. ಶೆಡ್ಯೂಲ್ -9ಎ ರಲ್ಲಿ 2ನೇ ಆರೋಪಿತೆ, ರೂ.32,489 ಎಂದು ತೋರಿಸಿದ್ದು ಆದರೆ ನಾವು ಪಡೆದುಕೊಂಡ ದಾಖಲಾತಿಯಿಂದ ಅದು ರೂ.35,185.35 ಆಗಿದ್ದು, ಅದೇ ಮೊತ್ತವನ್ನು ಪರಿಗಣಿಸಲಾಗಿದೆ.

132. ಶೆಡ್ಯೂಲ್ -9ಬಿ ರಲ್ಲಿ 1ನೇ ಆರೋಪಿಯು , 2 ಲಕ್ಷ ಜಿ.ಪಿ.ಎಫ್ ಸಾಲ ಆದಾಯವೆಂದು ತೋರಿಸಿದ್ದು ಆದರೆ ಚೆಕ್ ಅವಧಿಯ ರೂ.1,25,000 ಮಾತ್ರ ಆದಾಯಕ್ಕೆ ಪರಿಗಣಿಸಲಾಗಿದೆ. ಶೆಡ್ಯೂಲ್-9ಸಿ , 10, 11ಎ, 11ಬಿ ರಲ್ಲಿ ಯಾವುದೇ

ಮಾಹಿತಿ ಸಲ್ಲಿಸಿರುವುದಿಲ್ಲ.

133. ಶೆಡ್ಯೂಲ್ -12ಎ ರಲ್ಲಿ ಬಂಗಾರದ ಆಭರಣಗಳನ್ನು ಉಡುಗೊರೆ ಎಂದು ತೋರಿಸಿದ್ದು, ಆದರೆ 2ನೇ ಆರೋಪಿತರವರು ತಮ್ಮ ಆಸ್ತಿ ಮತ್ತು ಋಣತಖ್ತೆಯಲ್ಲಿ 56 ಗ್ರಾಂ ಮದುವೆ ಕಾಲದಲ್ಲಿ ಪಡೆದ ಉಡುಗೊರೆ ಎಂದು ತಿಳಿಸಿದ್ದು, ಅದನ್ನು ಮಾತ್ರ ಉಡುಗೊರೆಯಾಗಿ ಪಡದುಕೊಂಡದ್ದು ಎಂದು ಪರಿಗಣಿಸಲಾಯಿತು. ಉಳಿದ ಬಂಗಾರದ ಆಭರಣಗಳ ಮೊತ್ತವನ್ನು ಅಕ್ಕಸಾಲಿಗರು ನಿರ್ದರಿಸಿದಂತೆ ರೂ.11,11,869 ಎಂದು ನಮೂದಿಸಲಾಗಿದೆ.

134. ಶೆಡ್ಯೂಲ್- 12ಬಿ ರಲ್ಲಿ ಯಾವುದೇ ಮಾಹಿತಿ ಸಲ್ಲಿಸಿರುವುದಿಲ್ಲ. ಶೆಡ್ಯೂಲ್-13(ಎ) ರಲ್ಲಿ 2ನೇ ಆರೋಪಿರವರು ವಾಸಿಸುವ ಮನೆಯ ಮೌಲ್ಯವನ್ನು ರೂ.51,61,430 ಎಂದು ಸಲ್ಲಿಸಿದ್ದು ಆದರೆ ಕಟ್ಟಡದ ನಿರ್ಮಾಣದ ನಂತರ ಹಲವಾರು ಬೆಳವಣಿಗೆಗೆಳನ್ನು ಮಾಡಿದ್ದು ತನಿಖೆಯಲ್ಲಿ ಕಂಡು ಬಂದಿದ್ದರಿಂದ ತಾತ್ರಿಕ ಅಧಿಕಾರಿಗಳು ನೀಡಿದ ರೂ.53 ಲಕ್ಷವನ್ನು ತನಿಖೆಯಲ್ಲಿ ಪರಿಗಣಿಸಲಾಗಿದೆ.

135. ಶೆಡ್ಯೂಲ್-13(ಬಿ) ರಲ್ಲಿ ಆರೋಪಿತರು, ರೂ.31,430 ಗಳನ್ನು ಜಮೀನಿನ ಮಾರಾಟದ ಅದಾಯ ಎಂದು ತೋರಿಸಿದ್ದು, ದಾಖಲಾತಿಗಳ ಪ್ರಕಾರ, ಮಾರಿದ ಮೊತ್ತ ರೂ.4,000 ಗಳನ್ನು ಆದಾಯಕ್ಕೆ ಪರಿಗಣಿಸಲಾಗಿದೆ.

136. ಶೆಡ್ಯೂಲ್-14(ಎ) ರಲ್ಲಿ 1 ಮತ್ತು 2ನೇ ಆರೋಪಿತರು ರೂ.4,46,900 ಎಂದು ತೋರಿಸಿದ್ದು ಆದರೆ ಮಹಜರು ಕಾಲಕ್ಕೆ ನಿಗದಿಪಡಿಸಿದ ಮೌಲ್ಯವಾದ ರೂ.3,06,007 ನ್ನು ಅವರ ಆಸ್ತಿಗೆ ಪರಿಗಣಿಸಲಾಗಿದೆ. ಪಂಚನಾಮೆ ಕಾಲಕ್ಕೆ ಸಿಕ್ಕ

ಹಲವಾರು ವಸ್ತುಗಳನ್ನು ಉಡುಗೊರೆ ಎಂದು ಅಫಿದಾವಿತ್ ಸಲ್ಲಿಸಿದ್ದು ಆದರೆ ಅವುಗಳು ಚೆಕ್ ಅವಧಿಯ ನಂತರ ತಯಾರಿಸಿದ್ದರಿಂದ ಅವುಗಳನ್ನು ಒಪ್ಪಿಕೊಂಡಿರುವುದಿಲ್ಲ. ಪಂಚನಾಮೆಯ ಕಾಲಕ್ಕೆ ಪಂಚನಾಮೆಯಲ್ಲಿ ನಮೂದಿಸಿದ ಕ್ರಮಸಂಖ್ಯೆ-9, 21, 22, 30, 32, 40, 51,53, 83, 84, 88, 124, 126, 175, 176, 185 ಇವುಗಳನ್ನು 1 ಮತ್ತು 2ನೇ ಆರೋೇಪಿತರು ಉಡುಗೊರೆ ಎಂದು ತಿಳಿಸಿದ್ದರಿಂದ ಅವುಗಳ ಮೊತ್ತವನ್ನು ಉಡುಗೊರೆ ಎಂದು ಪರಿಗಣಿಸಲಾಗಿದೆ. ಶ್ರೀಮತಿ ಕುಮುದಾ ರವರು ಸದರಿ ಮನೆಯಲ್ಲಿ ಸಿಕ್ಕ ವಾಷಿಂಗ್ ಮಿಷನ್ ಉಡುಗೊರೆ ಎಂದು ಅಫಿದಾವಿತ್ ನೀಡಿದ್ದು ಆದರೆ 2ನೇ ಆರೋಪಿತೆಯು 2006 ರ ಆದ ಆಸ್ತಿ ಮತ್ತು ಋಣ ತಖ್ತೆಯಲ್ಲಿ ಖರೀದಿಸಿರುವುದಾಗಿ ನಮೂದಿಸಿರುತ್ತಾರೆ ಮತ್ತು ಕುಮುದಾರವರು ಅದನ್ನು ಉಡುಗೊರೆಯಾಗಿ ನೀಡಿರುವುದನ್ನು ನಿರಾಕರಿಸಿರುತ್ತಾರೆ. ಈ ಎಲ್ಲಾ ಕಾರಣದಿಂದ 1 ಮತ್ತು 2 ನೇ ಆರೋಪಿತರು ನೀಡಿದ ಶೆಡ್ಯೂಲ್ ನ್ನು ಒಪ್ಪಿಕೊಳ್ಳದೇ ತನಿಖಾ ಕಾಲದಲ್ಲಿ ಅಂದಾಜಿಸಿದ ಮೌಲ್ಯವನ್ನು ಪರಿಗಣಿಸಲಾಗಿದೆ.

137. ಶೆಡ್ಯೂಲ್-14(ಬಿ) ರಲ್ಲಿ ಯಾವುದೇ ಮಾಹಿತಿ ನಮೂದಿಸಿರುವುದಿಲ್ಲ. ಶೆಡ್ಯೂಲ್-14(ಸಿ) ರಲ್ಲಿ ವಾಹನಕ್ಕೆ ಮಾಡಿದ ಇಂಧನ ವೆಚ್ಚಗಳನ್ನು ನೀಡಿದ್ದು ಅದನ್ನು ಪರಿಶೀಲಿಸಲಾಗಿ ಮಾರುತಿ ಕಾರು 420 ಲೀಟರ್ ಗೆ 68,089 ಕಿ.ಮೀ ಓಡಿದಂತೆ ತೋರಿದ್ದು , ಹೋಂಡ ಬೈಕ್ 20 ಲೀಟರ್ ಗೆ 21,342 ಕಿ.ಮೀ ಓಡಿದಂತೆ ತೋರಿದ್ದು , ಹೋಂಡಾ ಆ್ಯಕ್ಟಿವಾ 16 ಲೀಟರ್ ಗೆ 20,000 ಕಿ.ಮೀ ಓಡಿದಂತೆ ತೋರಿದ್ದು, ಒಪ್ಪಲು ಸಾಧ್ಯವಿರುವುದಿಲ್ಲ. ಆದ್ದರಿಂದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿದ ಮೌಲ್ಯವನ್ನೇ ಪರಿಗಣಿಸಲಾಯಿತು.

138. ಶೆಡ್ಯೂಲ್-14(ಡಿ) ರಲ್ಲಿ ಬೈಕ್ ಮಾರಿದ ಬಗ್ಗೆ ನಮೂದಿಸಿದ್ದು, ಅವರು ನಮೂದಿಸಿದ ಮೌಲ್ಯವನ್ನು ಬಿಟ್ಟು ಖರೀದಿ ಮೌಲ್ಯ ಮತ್ತು ಮಾರಾಟದ ಮೌಲ್ಯ ದಾಖಲಾತಿಗಳಂತೆ ಪಡೆದುಕೊಂಡು ಮಾರಾಟದಲ್ಲಿ ಆದ ನಷ್ಟವನ್ನು ವೆಚ್ಚಕ್ಕೆ ಪರಿಗಣಿಸಲಾಯಿತು.

139. ಶೆಡ್ಯೂಲ್-15(ಎ), 16(ಎ), 16(ಬಿ) ನ್ನು ಒಪ್ಪಿಕೊಳ್ಳಲಾಗಿದ್ದು ಮೂಲಹೂಡಿಕೆಯನ್ನು ಮಾತ್ರ ಪರಿಗಣಿಸಲಾಯಿತು. ಶೆಡ್ಯೂಲ್-17 ರಲ್ಲಿ ಮಕ್ಕಳ ವಿದ್ಯಾಬ್ಯಾಸದ ಖರ್ಚು , ಶಾಲಾ ದಾಖಲಾತಿಗಳಂತೆ ಪರಿಗಣಿಸಲಾಯಿತು.

140. ಶೆಡ್ಯೂಲ್-18 ರಲ್ಲಿ ಆಪಾದಿತರು ಮನೆಯಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮಗಳ ಒಟ್ಟು ವೆಚ್ಚ ರೂ. 14,000 ಎಂದು ತೋರಿಸಿದ್ದು, ಅದರೆ ನಾವು ಪಡೆದುಕೊಂಡ ಗೃಹಪ್ರವೇಶ ಇತ್ಯಾದಿ ದಾಖಲಾತಿಗಳಂತೆ ರೂ.1,12,000 ಎಂದು ಪರಿಗಣಿಸಲಾಯಿತು. ಶೆಡ್ಯೂಲ್-19 ನ್ನು ಒಪ್ಪಿಕೊಳ್ಳಲಾಯಿತು. ಶೆಡ್ಯೂಲ್-20 ಮತ್ತು 21 ರಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ.

141. ಶೆಡ್ಯೂಲ್-22 ರಲ್ಲಿ ಅಪಾದಿತರು ಕೌಟುಂಬಿಕ ವೆಚ್ಚ ರೂ.5,000 ಎಂದು ತೋರಿಸಿದ್ದು ಆದರೆ ಕೌಟುಂಬಿಕ ವೆಚ್ಚ ರೂ.12,54,005 ಎಂದು ಅಧೀಕೃತ ಅಧಿಕಾರಿಗಳು ನೀಡಿದ ಮಾಹಿತಿಯನ್ನೇ ತನಿಖೆಯಲ್ಲಿ ಪರಿಗಣಿಸಲಾಯಿತು.

142. ಶೆಡ್ಯೂಲ್-23 ರಲ್ಲಿ ಆಪಾದಿತರು ಮನೆಯ ಕುಟುಂಬದ ದಾಖಲೆಗಳನ್ನು ಒಪ್ಪಿಕೊಂಡಿದ್ದು, ಆದರೆ ಅವರು ಸಸ್ಯಾಹಾರಿ ಎಂದು ತೋರಿಸಿದ್ದು,

ಮಹಜರು ಕಾಲಕ್ಕೆ ಮಾಂಸಹಾರಿ ವಸ್ತುಗಳು ಮತ್ತು ಅದಕ್ಕೆ ಉಪಯೋಗಿಸುವ ಮಸಾಲೆಗಳು ಸಿಕ್ಕಿರುವುದರಿಂದ ಅವರು ಸಸ್ಯಹಾರಿ ಎಂದು ಪರಿಗಣಿಸಲು ಬರುವುದಿಲ್ಲ.

143. ತನಿಖೆಯಲ್ಲಿ ಆಸ್ತಿ ಮತ್ತು ಋಣತಖ್ತೆ ಪರಿಶೀಲನೆ ಮಾಡಿದ್ದು 1ನೇ ಆರೋಪಿಯು 1998 ರಲ್ಲಿ ಸೇವೆಗೆ ಸೇರಿದ್ದರೂ ಸಹ , 1995-96 ರವರೆಗೆ ಯಾವುದೇ ಆಸ್ತಿ ಮತ್ತು ಋಣತಖ್ತೆ ಸಲ್ಲಿಸಿರುವುದಿಲ್ಲ. ನಂತರದ ಪಟ್ಟಿಗಳಲ್ಲಿ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಬಗ್ಗೆ ಸಮರ್ಪಕ ಮಾಹಿತಿ ಕಂಡು ಬರುತ್ತದೆ. 1998 ರಲ್ಲಿ ಪಿತ್ರಾರ್ಜಿತ ಆಸ್ತಿಯ ಬಗ್ಗೆ ನಮೂದಿಸಿದ್ದು ಅಲ್ಲಿ ಅವರು ಯಾವುದೇ ಪಾಲು ಪಡೆಯುತ್ತಿರಲಿಲ್ಲ ಎಂದು ಪರಿಗಣಿಸಲಾಯಿತು.

144. 2000-01 ರಂದು ತೋಟಗಾರಿಕೆ ಆದಾಯ ರೂ.1,000 ಎಂದು ನಮೂದಿಸಲಾಗಿದ್ದು , 2003-04ರಿಂದ 2015-16 ರವರೆಗೆ ಯಾವುದೇ ಕೃಷಿ ಆದಾಯ ನಮೂದು ಇರುವುದಿಲ್ಲ. 2003 ರ ಪಟ್ಟಿಯಲ್ಲಿ 20 ಗ್ರಾಂ , 2010 ರಲ್ಲಿ 10 ಗ್ರಾಂ, 2011 ರ ಪಟ್ಟಿಯಲ್ಲಿ 20 ಗ್ರಾಂ , 2012 ರ ಪಟ್ಟಿಯಲ್ಲಿ 30 ಗ್ರಾಂ , 2013 ರ ಪಟ್ಟಿಯಲ್ಲಿ 20 ಗ್ರಾಂ, 2014 ರ ಪಟ್ಟಿಯಲ್ಲಿ 30 ಗ್ರಾಂ , 2015 ರ ಪಟ್ಟಿಯಲ್ಲಿ 20 ಗ್ರಾಂ ಹೀಗೆ 150 ಗ್ರಾಂ ಖರೀದಿಸಿದ ಬಗ್ಗೆ ನಮೂದು ಇದ್ದು, ಶೆಡ್ಯೂಲ್ ನಲ್ಲಿ ಉಡುಗೊರೆ ಎಂದು ತೋರಿಸಿರುವುದು ತಪ್ಪು ಎಂದು ಕಂಡುಬಂದಿರುತ್ತದೆ.

145. 2ನೇ ಆರೋಪಿಯ ಆಸ್ತಿ ಮತ್ತು ಋಣತಖ್ತೆಯನ್ನು ಪರಿಶೀಲಿಸಲಾಗಿ, ಅವರು 2011-12 , 2014-15, 2015-16 ರ ಪಟ್ಟಿಯನ್ನು ಮಾತ್ರ ತಮ್ಮ

ಅಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. 2001-02 ರಲ್ಲಿ 50ಗ್ರಾಂ, 2006-07 ರಲ್ಲಿ 50 ಗ್ರಾಂ, 2009-10 ರಲ್ಲಿ 55 ಗ್ರಾಂ ತೋರಿಸಿದ್ದು ಆದರೆ ಶೆಡ್ಯೂಲ್ ನಲ್ಲಿ 56 ಗ್ರಾಂ ಮದುವೆ ಉಡುಗೊರೆ ಎಂದು ನಮೂದಿಸಿರುತ್ತಾರೆ. ಅದ್ದರಿಂದ ಮನೆಯಲ್ಲಿ ಸಿಕ್ಕ 482 ಗ್ರಾಂ ಬಂಗಾರದಲ್ಲಿ 56ಗ್ರಾಂ ಬಂಗಾರ ಮಾತ್ರ ಉಡುಗೊರೆ ಎಂದು ಪರಿಗಣಿಸಲಾಗಿದ್ದು, ಮತ್ತು ಉಳಿದ ಆಭರಣಗಳನ್ನು ಅವರು ಖರೀದಿಸಿದಂತೆ ತೋರಿಸಿದ ಅವಧಿ ಮತ್ತು ಮೌಲ್ಯಕ್ಕೆ ದರ ನಿಗದಿಪಡಿಸಲಾಗಿದೆ. ಇವೆಲ್ಲವನ್ನು ಲೆಕ್ಕ ಹಾಕಿ 121 ಗ್ರಾಂ ಬಂಗಾರವನ್ನು 2016 ರಲ್ಲಿ ಖರೀದಿಸಿರುವುದಾಗಿ ಪರಿಗಣಿಸಲಾಯಿತು. ಪಂಚನಾಮೆಯಲ್ಲಿ ನಮೂದಿಸಿದ ಬೆಲೆ ಬಾಳುವ ವಸ್ತುಗಳ ಯಾವುದೇ ಮಾಹಿತಿ ಈ ಪಟ್ಟಿಗಳಲ್ಲಿ ನಮೂದು ಇರುವುದಿಲ್ಲ. 2011-12 ರಲ್ಲಿಯ ಆಸ್ತಿ ಋಣತಖ್ತೆ ಪಟ್ಟಿ ನಮಗೆ ಮನೆಯಲ್ಲಿ ಮಹಜರು ಕಾಲಕ್ಕೆಸಿಕ್ಕಿದ್ದು , ಅದೇ ವರ್ಷ ಆಸ್ತಿ ಮತ್ತು ಋಣತಖ್ತೆ ಯನ್ನು ವೈದ್ಯಾಧಿಕಾರಿಗಳು ಪ್ರಾಥಮಿಕ ಆರೋಗ್ಯಕೇಂದ್ರ ಪಡಂಗಡಿ ರವರು ನೀಡಿದ ಆಸ್ತಿ ಮತ್ತು ಋಣತಖ್ತೆ ಪಟ್ಟಿಯನ್ನು ಹೊಂದಾಣಿಕೆ ಮಾಡಿ ನೋಡಿದರೆ ಎರಡೂ ಬೇರೆಬೇರೆಯಾಗಿದ್ದು ಆದ್ದರಿಂದ ಅದನ್ನು ಒಪ್ಪಲು ಬರುವುದಿಲ್ಲ.

146. 1 ಮತ್ತು 2ನೇ ಆರೋಪಿತರು, ಯಾವುದೇ ವೈಯಕ್ತಿಕ ಆದಾಯದ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಗೆ ನೀಡಿರುವುದಿಲ್ಲ.

147. ಈ ರೀತಿ ತನಿಖಾ ಕಾಲಕ್ಕೆ ಪಡೆದುಕೊಂಡ ಸಾಕ್ಷ್ಯದಾರಗಳ ಪ್ರಕಾರ ಮತ್ತು ಭ್ರಷ್ಟಾಚಾರ ನಿಯಂತ್ರಣ ಕಾಯಿದೆ ಅನ್ವಯ ಆರೋಪಿಗಳು ನೀಡಿದ ಶೆಡ್ಯೂಲ್ ಗಳನ್ನು ಪರಿಶೀಲನೆ ಮಾಡಿ ತನಿಖೆ ಪೂರೈಸಿ, ತನಿಖೆಯ ಕೊನೆಯಲ್ಲಿ

ಆರೋಪಿಗಳಿಗೆ ಪ್ರಶ್ನಾವಳಿಗಳನ್ನು ಕೊಟ್ಟು ಅವಕಾಶವನ್ನೂ ಸಹ ನೀಡಿ, ಲೆಕ್ಕಾಚಾರ ಹಾಕಿದಾಗ, ಆಪಾದಿತರ ಚೆಕ್ ಅವಧಿಯಲ್ಲಿ ಒಟ್ಟು ಆಸ್ತಿಗಳು ರೂ.88,54,127.33 ಆಗುತ್ತಿದ್ದು, ಒಟ್ಟು ಖರ್ಚು ರೂ.31,10,422.38 ಆಗುತ್ತಿದ್ದು, ಅವರ ಬಲ್ಲ ಮೂಲಗಳ ಆದಾಯ ರೂ.81,10,345.44 ಆಗುತ್ತಿದ್ದು, ಅಸಮತೋಲನ ಆಸ್ತಿ ಮೌಲ್ಯ ರೂ.38,54,204.27 ಆಗುತ್ತಿದ್ದು, ಶೇಕಡಾವಾರು 47.52 ಆಗುತ್ತಿದ್ದರಿಂದ ಸದರಿಯವರ ಅಭಿಯೋಜನೆಗೆ ಒಳಪಡಿಸಬೇಕಾಗಿರುವುದರಿಂದ ಹಾಗೂ 1 ಮತ್ತು 2ನೇ ಆರೋಪಿತರನ್ನು ಸಕ್ಷಮ ಪ್ರಾಧಿಕಾರಕ್ಕೆ ಮೇಲಾಧಿಕಾರಿಗಳ ಮೂಲಕ ದಿನಾಂಕ 18.09.2018 ರಂದು ಒಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

148. ದಿನಾಂಕ 28.10.2019 ರಂದು ನನ್ನ ವರ್ಗಾವಣೆಯಾಗಿದ್ದು , ಮುಂದಿನ ತನಿಖೆಯನ್ನು ಚಾಸಾ-90 ರವರಿಗೆ ಹಸ್ತಾಂತರಿಸಿರುತ್ತೇನೆ.

**ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.